85/15-5.

21 46(8)

Reg. No. M. 1550.
if not delivered please return to
"KODAGU" OFFICE, MERCARA.

ಕೊಡಗು.

ಸರ್ವೇಷಾಂ ಭೂತದಯಯೈವ ವಿದ್ಯಾ ನೀತಿ ಪ್ರಯುಕ್ತಾಃ ಜಗತ್ಯಾಶ್ಚೇದ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಮೂಚಿಮಂಡ ಯಂ. ಗಣಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಫೆಬ್ರುವರಿ ತಾರೀಕು ೧೦ನೇ ಶುಕ್ರವಾರ. | ಸಂಚಿಕೆ

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS.

Attractive ahd inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Silver Guindys, Photo lockets, Dimond nose-screws. cut-ruby ear-rings. etc., etc., etc., in all prices Very attractive Prices most moderate.

Estimates free on enquiry.

V. Subramaniyer
Jeweller.

Designs free on enquiry.

Telegrams:
'PRECIOUS.'

Telephone:
3145.

CATALOGUE ON ENQUIRY.

52—11

Post Box 423, Triplicane, P. O., MADRAS.

The Popular Insurance Co., Ltd.

Head Office :—Mangalore, S. India.

The Pioneer Life Office of the West Coast.

While having the most up-to-date features in modern life insurance such as easy revival facilities, non-forfeiture privileges, permanent dis-ability concession. Joint life assurance. female assurance and a very Popular RUPEE POLICY, the company has unrivalled scope for Economic Working.

Wanted an influential chief agent for Coorg on most remunerative terms.

For particulars apply to,

The Managing Director.

52—2

ಕೊಡಗು.

ಸನ್ ೧೮೫೩ನೇ ಇಸವಿ

ಫೆಬ್ರವರಿ ತಾ. ೧೦ನೇ ಶುಕ್ರವಾರ.

ಸಿಬ್ಬಂದಿ ಸಂಬಳದ ಖೋತೆ.

ಕಳೆದ ವರ್ಷ ಆರ್ಥಿಕ ಬಿಕ್ಕಟ್ಟಿಗಾಗಿ ಒಟ್ಟು ಇಂಡಿಯಾ ಹಲವ್ಲಿ ಅದರಂತೆ ಕೊಡಗಿನಲ್ಲೂ ಸಹ ಎಲ್ಲಾ ಸರ್ಕಾರಿ ಉದ್ಯೋಗಸ್ಥರ ಸಂಬಳದಲ್ಲಿ ನೂರಕ್ಕೆ 10ರಷ್ಟು ಕಡಿಮೆ ಮಾಡಿದ್ದರು. ಮಧ್ಯವರ್ತಿ ಸರ್ಕಾರಂದ ತಾಬೆಯಲ್ಲಿರುವ ಎಲ್ಲಾ ಅಧಿಕಾರಿಗಳ ಸಂಬಳದಲ್ಲಿ ಕಡಿಮೆಯೂಗಿದ್ದ ತೀಕಡ 10ರಲ್ಲಿ 5ರಷ್ಟು ತಾ. 1—4—33ರಿಂದ ಕೊಡುವುದೆಂತ ಮಧ್ಯವರ್ತಿ ಸರ್ಕಾರವು ತೀರ್ಮಾನ ಮಾಡಿದೆ. ಸ್ಟೇಟ್ ಸೆಕ್ರೆಟರಿಯವರು ನೇಮಕ ಮಾಡುವ ಐ. ಸಿ. ಯಸ್. ವಗೈರೆ ಒಟ್ಟು ಹಿಂದೂ ಸ್ಥಾನದ ಸರ್ವಿಸಿನವರಿಗೆ ಸಹ ತೀಕಡ 5ಕ್ಕೆ ಎರಡಷ್ಟು ಸಂಬಳ ಕಡಿಮೆ ಮಾಡಬಹುದೆಂತ ಪಾರ್ಲಿಮೆಂಟಿನ ಮಂಜೂರಾತಿ ಪಡೆಯುವ ಏರ್ಪಾಡು ಮಾಡಲಾಗುತ್ತದೆಯಂತೆ. ಆದರೆ ಮದ್ರಾಸ್ ಸರ್ಕಾರವು ತನ್ನ ಆಡಳಿತಕ್ಕೆ ಒಳಪಟ್ಟ ಎಲ್ಲಾ ಅಧಿಕಾರಿಗಳ ಸಂಬಳವನ್ನು ಮೊದಲಿನ ದರಕ್ಕೆ ಏರಿಸಿ ಖೋತೆ ಮಾಡಿದ್ದನ್ನು ಪೂರ್ತಿಯಾಗಿ ರದ್ದು ಮಾಡಿದೆಯಂತಾಗಿ ಪತ್ರಿಕೆಗಳಿಂದ ತಿಳಿದು ಬಂದಿದೆ. ಆದರೆ ಮದ್ರಾಸಿನಲ್ಲಿ ಕೆಲಸ ಮಾಡುವ ಐ. ಸಿ. ಯಸ್. ಮುಂತಾದ ಇಂಪೀರಿಯಲ್ ಸರ್ವಿಸಿನವರು ಮಧ್ಯವರ್ತಿ ಸರ್ಕಾರದ ತೀರ್ಮಾನಕ್ಕೆ ಒಳಪಡುತ್ತಾರೋ ಯಾ ಮದ್ರಾಸ್ ಸರ್ಕಾರದ ತೀರ್ಮಾನಕ್ಕೆ ಒಳಪಡುತ್ತಾರೋ ತಿಳಿದಿಲ್ಲ.

ಒಟ್ಟು ಹಿಂದೂಸ್ಥಾನದಲ್ಲೇ ಆಗಲಿ ಪ್ರಾಂತ್ಯಗಳಲ್ಲೇ ಆಗಲಿ, ಖೋತೆ ಮಾಡಿದ ಸಂಬಳವನ್ನು ಪುನಃ ಕೊಡುವ ಕಾಲ ಬಂದಿಲ್ಲವೆಂತ ಕಂದಾಯ ಕೊಡುವ ಜನರ ಅಭಿಪ್ರಾಯವೆಂಬುವುದರಲ್ಲಿ ಸಂಶಯವಿಲ್ಲ. ಜಮೀನಿನಿಂದ ಬರುವ ಉತ್ಪತ್ತಿಯೊಗಲೀ ಅಂಥಾ ಹುಟ್ಟುವಳಿಗಳಿಗೆ ದೊರಕುವ ಬೆಲೆಯೊಗಲೀ ಕಳೆದ ವರ್ಷಕ್ಕಿಂತ ಉತ್ತಮವಾಗಿಲ್ಲ. ಇನ್ನೂ ಕೆಟ್ಟುಹೋಗಿದೆಯೆಂತ ಈ ದೇಶದ ಅನುಭವದಿಂದ ಹೇಳಬಹುದು.

ನಮ್ಮ ದೇಶದ ಸರ್ಕಾರವು ಏನು ಮಾಡುತ್ತದೋ ನೋಡಬೇಕಷ್ಟೆ. ನಮ್ಮ ದೇಶದ ಸ್ಥಿತಿಯನ್ನು ನೋಡಿದರೆ ಈ ದೇಶದಲ್ಲಿ ಸಂಬಳವನ್ನು ಮೊದಲಿನ ದರಕ್ಕೆ ಏರಿಸುವ ಕಾಲವು ಇನ್ನೂ ಬಂದಿಲ್ಲವೆಂತ ಖಂಡಿತವಾಗಿ ಹೇಳಬಹುದು. ನಾವು ಕಳೆದ ವರ್ಷ ಸೂಚಿಸಿದಂತೆ 50 ರೂ. ಗೆ ಕಡಿಮೆ ಇರುವ ಸಂಬಳವನ್ನು ಕಡಿಮೆ ಮಾಡಲೇಬಾರದಿತ್ತು. ಆದರಿಂದ 50 ರೂ. ಗೆ ಏರಿದ ಸಂಬಳದ ದರವನ್ನು ಮೊದಲಿನ ದರಕ್ಕೆ ಏರಿಸಬಹುದು, 50 ರೂ. ಮೇಲೆ 100 ರೂ. ವರೆಗೆ ಮೊದಲಿನ ಸಂಬಳದಲ್ಲಿ ಶೇಕಡ 5ರಷ್ಟು ಕಡಿಮೆ ಮಾಡಿ ಅದಕ್ಕಿಂತ ಹೆಚ್ಚಿನವರಿಗೆ ಶೇಕಡ 10ರಷ್ಟು. ಈ ವರ್ಷ ಜಾರಿಯಲ್ಲಿರುವಂತೆಯೇ ಇರಬೇಕೆಂತ ಖಂಡಿತವಾಗಿಯೂ ಹೇಳಬಹುದು. 250ಕ್ಕಿಂತ ಹೆಚ್ಚಿಗೆ ಇರುವವರ ಸಂಬಳವನ್ನು ನಾವು ಕಳೆದ ವರ್ಷ ಸೂಚಿಸಿರುವಂತೆ ಶೇಕಡ 10ಕ್ಕಿಂತಲೂ ಹೆಚ್ಚಿಗೆ ಕಡಿಮೆ ಮಾಡಬಹುದಾದರೂ ಅವನ್ನು ಸರ್ಕಾರವು ಈ ವರ್ಷ ಯೋಚಿಸುವ ಸಂಭವವಿಲ್ಲ. ಆದರೂ ಮೊದಲಿನ ಸಂಬಳವನ್ನೇ ಕೊಡುವ ಕಾಲವಂತೂ ಖಂಡಿತವಾಗಿಯೂ ಬಂದಿರುವುದಿಲ್ಲ.

ನಮ್ಮ ದೇಶದಲ್ಲಿ ದೊರೆಯುವ ಮುಖ್ಯ ಉತ್ಪತ್ತಿಯೂದ ಭತ್ತದ ಧಾರಣೆಯು ಕಳೆದ ವರ್ಷಕ್ಕಿಂತ ಕಡಿಮೆಯಾಗಿದೆ. ಉತ್ಪತ್ತಿಯೂ ಕಳೆದ ವರ್ಷಕ್ಕಿಂತ ಕಡಿಮೆಯೆಂತ ಬಾತ್ಮಿದಾರರುಗಳಿಂದ ಪತ್ರಗಳು ಬರುತ್ತಲಿವೆ. ಡಿಸ್ಟ್ರಿಕ್ಟ್ ಜೋಡಿನವರಂತೂ ಖಾನೂನು ಮೇರೆ ಹಕ್ಕಳಬಹುದಾದಷ್ಟು ಅಂದರೆ ರೂಪಾಯಿಗೆ 2 ಆಣೆಯಂತೆ ಪೂರ್ತಿ ಸೆಸ್ ಹಾಕಿಬಿಟ್ಟಿದ್ದಾರೆ. ಭತ್ತಕ್ಕೆ 5 ರೂ. ಯೂ 6 ರೂ. ಧಾರಣೆ ಇದ್ದಾಗ ಸೆಸ್ಸನ್ನು ಏರಿಸಿದರು. ಈ ಸೆಸ್ಸನ್ನು ಕಡಿಮೆ ಮಾಡಬೇಕಾದ ಕಾಲ ಏರಿದೆ. ಸಹಕಾರಿ ಸಂಘಗಳ ಲೇವಾ ದೇವಿ ಮೇಲೆ ಕಳೆದ ವರ್ಷ ಹಾಕಿದ ತೆರಿಗೆಯು ಜನರ ಮನಸ್ಸನ್ನು ಬಹಳವಾಗಿ ನೋಯಿಸಿದೆ, ಆ ನೋವಿನ ಶಕ್ತಿಯ ಮರೆಯುವಂಥಾದ್ದಲ್ಲ. ಇದೇ ಮೊದಲಾದ ಇನ್ನೂ ಅನೇಕ ಹೊಸ ತೆರಿಗೆಗಳನ್ನು ಹಾಕಿದ್ದಾರೆ. ಈ ಹೊಸ ತೆರಿಗೆಗಳನ್ನು ರದ್ದು ಮಾಡಿದ ಮೇಲಲ್ಲವೇ ದೊಡ್ಡ ಅಧಿಕಾರಿಗಳ ಸಂಬಳವನ್ನು ಮೊದಲಿನ ದರಕ್ಕೆ ಏರಿಸುವ ಯೋಚನೆ ಮಾಡಬೇಕಾದದ್ದು? ದೊಡ್ಡ ಅಧಿಕಾರಿಗಳಿಗೆ ಮೊದಲು ದೊರಕುತ್ತಿದ್ದ ಸಂಬಳ ಕಡಿಮೆ ಮಾಡಿದರೆ ಅವರ ಬ್ಯಾಂಕಿನ ಲೆಕ್ಕದ ಅಂದಾಜು ಕಡಿಮೆಯಾಗಬಹುದು, ಅಥವಾ ಹೊಸ ಆಸ್ತಿ ಕೊಂಡುಕೊಳ್ಳಲು ಸ್ವಲ್ಪ ಹೆಚ್ಚು ಕಾಲ ಕಾಯಬೇಕಾಗಬಹುದು. ಆದರೆ ಸಾಧಾರಣ ರೈತನಿಗೆ ಸರ್ಕಾರವು ಸಹಾಯ ಮಾಡುವ ಯೋಚನೆ ಏನಾದರೂ ಮಾಡಿದೆಯೋ?

ರೈತನ ಮೇಲೆ ಹೊರಲಾರದ ಹೊರೆ ಹೊರಿಸಿಯೂ ಸಹ ಸರ್ಕಾರದ ಆರ್ಥಿಕ ಸ್ಥಿತಿಯೂದರೂ ಹೇಗಿದೆ? ಈ ವರ್ಷ ಉತ್ಪತ್ತಿಗಿಂತ ಖರ್ಚು ತುಂಬಾ ಹೆಚ್ಚಾಗಿದೆಯೆಂತಲೂ ಮುಂದಿನ ವರ್ಷ ಅಂದರೆ ತಾ. 1—4—33ರಿಂದ ಪ್ರಾರಂಭವಾಗುವ ವರ್ಷದಲ್ಲೂ ಉತ್ಪತ್ತಿಗಿಂತ ಖರ್ಚು ತುಂಬಾ ಹೆಚ್ಚಾಗುವ ಅಂದಾಜು ಮಾಡಲಾಗಿದೆಯಂತೆ. ಗಂಧಕ್ಕೆ ಹೆಚ್ಚಿಗೆ ಧಾರಣೆ ಬರುವ ಸಂಭವವಿಲ್ಲ. ಗಂಧದ ಎಣ್ಣೆ ಬದಲಿಗೆ ಜರ್ಮನಿ ದೇಶದಲ್ಲಿ ಏನೋ ಬೇರೆ ಕೃತಕ ವಸ್ತುವನ್ನು ಕಂಡು ಹಿಡಿದಿದ್ದಾರಂತೆ. ಸಮುದಾಯದ ಜನರ ಆರ್ಥಿಕ ಸ್ಥಿತಿಯು ಉತ್ತಮವಾದ ವಿನಹ ಮತ್ತು ಕುಡುಕತನವನ್ನು ಬಿಡಬೇಕೆಂತ ಜನರಲ್ಲಿ ಉಂಟಾದ ಜಾಗೃತಿಯು ಮುರೆತು ಹೋದ ವಿನಹ ಸೇಂದಿ ಸಾರಾಯಿಗಾಗಿ ಬರುವ ಸರ್ಕಾರಿ ಉತ್ಪತ್ತಿಯು ಹೆಚ್ಚಾಗುವ ಸಂಭವವಿಲ್ಲ. ಭೂಮಿ ಕಂದಾಯ ಕಡಿಮೆ ಮಾಡಬೇಕೆಂತ ಜಳವಳವೂ ನಡೆಯುತ್ತಲಿದೆ. ಹೀಗಿರುತ್ತಾ ಸರ್ಕಾರಿ ಆರ್ಥಿಕ ಪರಿಸ್ಥಿತಿಯು ಬಹಳ ಹೀನಾವಸ್ಥೆಯಲ್ಲಿದೆ.

ಈ ಎಲ್ಲಾ ಕಾರಣಗಳಿಂದ 50 ರೂ. ಸಂಬಳಕ್ಕಿಂತ ಹೆಚ್ಚಿರುವ ಸಂಬಳಗಳನ್ನು ಮೊದಲಿನ ದರಕ್ಕೆ ಏರಿಸುವ ಕಾಲ ಇನ್ನೂ ಬಂದಿಲ್ಲ. ಕೌನ್ಸಿಲಿನಲ್ಲಿ ಈ ವಿಷಯ ಚರ್ಚೆಗೆ ಬಂದೀತೆಂಬುವುದರಲ್ಲಿ ಸಂಶಯವಿಲ್ಲ. ಪ್ರಜಾ ಪ್ರತಿನಿಧಿಗಳು ತಮ್ಮ ಕರ್ತವ್ಯವನ್ನು ಮಾಡಲು ಮರೆಯಬಾರದು. ದೇಶದಲ್ಲಿ ಆರ್ಥಿಕ ಸಂಕಟವು ಅತಿ ಕಠಿಣ ತಂದಿಲ್ಲದೆ ಎಂಬದು ದೊಡ್ಡ ಅಧಿಕಾರಿಗಳಿಗೆ ಮರೆಯದೆ ಇರಲಿಕ್ಕಾಗಿಯೂದರೂ ಅವರ ಸಂಬಳದಲ್ಲಿ ಅಲ್ಪ ಸ್ವಲ್ಪ ಕಡಿಮೆಯೂಗಿಯೇ ಇರುವುದು ಅವಶ್ಯವಾಗಿದೆ.

ಭತ್ತದ ಬೆಳೆ.

(ಬರೆದು ಬಂದದ್ದು.)

ಕಳೆದ ಮಳೆಗಾಲವು ಎಡೆಬಿಡದೆ ನಡೆದುದರಿಂದ ಈ ವರ್ಷದ ಭತ್ತದ ಬೆಳೆಯು ಬಹಳ ಚೆನ್ನಾಗಿದೆಂಬ ಭಾವನೆಯು ಕುಯಿಲು ಹಾಗೂ ಒಕ್ಕಲು ಕೆಲಸ ಮುಗಿಯುವ ವರೆಗೂ ಜನರಲ್ಲಿತ್ತು. ಆದರೆ ಒಕ್ಕಲು ತೀರಿ ನೋಡಿದರೆ ಭತ್ತದ ಪಸಲು ಈ ವರ್ಷ ಬಹಳ ಕಮ್ಮಿಯಾಗಿದೆ. ನಾನು ವಿಚಾರಿಸಿತಿಳಿದ 64 ಜನರಲ್ಲಿ ಮೂರು ಜನರು ವಿನಹ (ಇವರಲ್ಲಿ ಇಬ್ಬರು ಹೊಳೆಕರೆ ಭೂಮಿಯವರು) ಎಲ್ಲರೂ ತಮಗೆ ಭತ್ತದ ಬೆಳೆ ಕಮ್ಮಿಯಾಗಿದೆಯಂತಾಗಿ ಹೇಳಿದ ಮೇರೆ ನೂರು ಬಟ್ಟಿ ಭೂಮಿಗೆ ಸರಾಸರಿ 7½ ಒಟ್ಟಿ ಭತ್ತ ಕಮ್ಮಿ ಕಂಡುಬಂತು. ಇದು ಬರೀ ಕಳೆದ ವರ್ಷದ ಉತ್ಪತ್ತಿಗೂ ಈ ವರ್ಷದ ಉತ್ಪತ್ತಿಗೂ ಇರುವ ವ್ಯತ್ಯಾಸವಾಗಿದೆ. ಸಾಲದುದಕ್ಕೆ ಈ ವರ್ಷ ಭತ್ತಕ್ಕೆ ಬೆಲೆಯೂ ಬಹಳ ಕಮ್ಮಿ ಎಂಬದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕಳೆದ ವರ್ಷ ಪೆಬ್ರವರಿ 1—2 ನೇ ವಾರಗಳಲ್ಲಿ ಗಾಡಿ 1 ರ 42 ರೂಪಾಯಿಂದ 48 ರೂಪಾಯಿ ವರೆಗೆ ಬೆಲೆ ಇತ್ತು. ಈ ವರ್ಷ ಹಳೇ ಪರೆಯಲ್ಲಿ ಬರೀ 30 ರೂಪಾಯಿಂದ 35 ರೂಪಾಯಿ ಬೆಲೆ ಇದೆ ಎಂದ ಮೇಲೆ ರೈತನ ಪಾಡೇನೆಂಬದು ವಿಚಾರಿಸಬೇಕಾಗಿದೆ.

ವರ್ಷದ 12 ತಿಂಗಳುಗಳಲ್ಲಿ ತನಗೆ ಬೇಕಾಗುವ ಬಟ್ಟೆ ಬರೆ, ತಾಲಿ ಕೊಂಡಳಗಳ ರಿಪೇರಿ ಸಹ ಮುಂದಿನ ಪೆಬ್ರವರಿ ವರ್ಷಿ ತಿಂಗಳಿಗೆ ಅಡ್ವರನ್ಸ್ ಮಾಡಿ ಮಡಗುತ್ತಾ ಇದ್ದದ್ದು ಬಡ ರೈತಾವಳಿಯವರ ಜಲ್ಮಹಕ್ಕಾಗಿದೆ ಆದರೆ ಈಗ ಪೆಬ್ರವರಿ ವರ್ಷಿ ತಿಂಗಳುಗಳನ್ನು ನೋಡಿದರೆ ಈ ಗತಿಯೂದ ಮೇಲೆ ಇನ್ನು ಮುಂದಿನ ಅಡ್ವರನ್ಸ್‌ಮೆಂಟಾದರೂ ಯಾವ ದಿನಕ್ಕೆ.

ನಿಜಸ್ಥಿತಿಯನ್ನು ಹೇಳುವದಾದರೆ ಸರಕಾರಿ ಕಂದಾಯ ಒಂದು ವಿನಹ ಬೇರೆ ಟಕಾವಿ ಕೋಪರೇಟಿವ್ ಸಾಲ, ಸಾಹುಕಾರಿ ಸಾಲಗಳೇನಾದರು ಇದ್ದರೆ ಅವರ ಬಾಳು ನಿರ್ಣಸಲು ಅಸದಳ. ಹಾಗೆ ಮೇಲಿನ ಮೂರು ಬಗೆಯಿಂದಾಗಿ ಸಾಲವಿಮುಕ್ತವರು ನಮ್ಮ ದೇಶದಲ್ಲಿ ಸಾವಿರಕ್ಕೆ 999 ಕ್ಕಿಂತ ಹೆಚ್ಚಿಂದೇ ನಿರ್ಭಯವಾಗಿ ಯಾರೂ ಹೇಳಬಹುದು.

ಇಂತು ಈ ರೀತಿಯೂಗಿ ರೈತನ ಬಾಳುವೆಯೂಗಿರುವಾಗ ಸ್ವಾಭಾವಿಕವಾಗಿ ರೈತನು ಸಹಾಯಕ್ಕಾಗಿ ಸರಕಾರದವರ ಮೋರೆಯನ್ನೇ ನೋಡಬೇಕಾಗಿದೆ.

ಸರಕಾರಕ್ಕೆ ಕಷ್ಟವೊದಗಿದಾಗ ರೈತನು ಸರಕಾರಕ್ಕೂ ರೈತನಿಗೆ ಕಷ್ಟವೊದಗಿದಂಗ ಸರಕಾರವು ರೈತನಿಗೂ ನೆರವಾದೀತೆ ಆ ಸರಕಾರವೂ ಆ ರೈತನೂ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಕೂಡಿ ನೆಮ್ಮದಿಯೂಗಿರುವಡು. ಸರಕಾರಕ್ಕೆ ಒದಗಿದ್ದ ಕಷ್ಟದಲ್ಲಿ ಎಷ್ಟಾ ಕನಿಷ್ಠ ರೈತನೂ ತನ್ನ ತನು ಇಲ್ಲವೇ ಧನಗಳನ್ನು ರಾತಿರಾತಿಯೂಗಿ ಆರ್ಪಿಸಿ ಸರಕಾರದ ಕಷ್ಟವನ್ನು ಪಾರುಗಾಣಿಸಿದನು. ಆದರೆ ಈಗ ದುರ್ದೈವವಶಾತ್ ರೈತನಿಗೆ ಒದಗಿದ ಈ ಕಷ್ಟಕಾಲದಲ್ಲಿ ಸರಕಾರವು ಸುಮ್ಮನಿರುವದು ಒಳ್ಳೆ ಸರಕಾರದ ಲಕ್ಷಣವಾಗಿರಲಿಕ್ಕಿಲ್ಲ.

ರೈತರು ತನಗೊದಗಿದ ಕಷ್ಟಕಾಲದಲ್ಲಿ ಸರಕಾರದ ಸಹಾಯವನ್ನು ಕೇಳಲು ಅನೇಕ ತರದ ಹಕ್ಕುಗಳಿದ್ದರೂ ಈಗಿನ ಸರಕಾರದ ಸ್ಥಿತಿಗೂ ನಮ್ಮ ಸ್ಥಿತಿಗೂ ಕೇಳಲು ಉಳಿದಿರುವದು ಕಂದಾಯವನ್ನು ಕಮ್ಮಿಮಾಡಬೇಕೆಂದೂ ಕಂದಾಯದ ಕಂತುಗಳನ್ನು ಹೆಚ್ಚಿಸಬೇಕೆಂಬುದೇ.

ರೈತರಿಗೆ ಒಳ್ಳೆ ಬೆಳೆ ಬೆಳೆದು ಒಳ್ಳೆ ಬೆಲೆ ಸಿಕ್ಕುತ್ತಿದ್ದಾಗ ಪೂರ್ವದ ರಾಜರಿಂದ ಕೊಡಲ್ಪಟ್ಟ ಜಮ್ಮ ನಿಭಂದನೆಗಳಿಗೆ ಎರಿ ಈಗಿನ ಸರಕಾರವು ಕಂದಾಯವನ್ನು ಹೆಚ್ಚಿಸಿದರೂ ರೈತನು ಮರುಮಾತಿಕ್ಕದೆ ಕಂದಾಯವನ್ನು ತೆರುತ್ತಿದ್ದದ್ದು ರೈತನಿಗೆ ಕಷ್ಟವೊದಗಿದಾಗ ಕಂದಾಯ ಕಮ್ಮಿಮಾಡಬಹುದೆಂಬ ಆಶೆಯಿಂದ ಎನ್ನಬಹುದು.

ರೈತರ ಸ್ಥಿತಿಗತಿಗಳನ್ನು ಚೆನ್ನಾಗಿ ವಿಚಾರಿಸದೆ ಸ್ವಾರ್ಥತೆಯನ್ನು ಮುಂದಿಟ್ಟುಕೊಂಡು ಕೂತಲ್ಲಿಂದ ಇಲ್ಲಸಲ್ಲದ ಸಂಗತಿಗಳನ್ನು ಸರಕಾರಕ್ಕೆ ಅರಿವುಕೊಡುವವನು ಸರಕಾರಕ್ಕೂ ವೇಶಕ್ಕೂ ದ್ರೋಹಿ ಎಂದು ಊಹಿಸಬೇಕಾಗುವದು.

ಸರಕಾರದವರು ಅಂತೆಯೇ ಇಲ್ಲಸಲ್ಲದ ನೆವಗಳನ್ನು ಮುಂದಿಡದೆ ಶೇಕಡ 25ರಷ್ಟು ಕಂದಾಯವನ್ನು ಕಮ್ಮಿಮಾಡುವದಲ್ಲದೆ ಕಂದಾಯದ ಕಂತುಗಳನ್ನು ಆರಕ್ಕೂ ಏರಿಸಿ ಕಳೆದ ಈ ಎರಡು ವರ್ಷಗಳಂತೆಯೇ ಕಂದಾಯದ ಕಂತು ವೇರೆ ಕೊಡಲು ತಪ್ಪಿದವರಿಂದ ಪ್ರೋಸೆಸ್ಸ್ ಫೀಸ್ ಸಹ ವಸೂಲು ಮಾಡುವದಿಲ್ಲವೆಂಬದ್ದನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಜುರ ಪಡಿಸಿ ಪ್ರಜೆಗಳಲ್ಲಿ ತೃಪ್ತಿಯನ್ನೂ ವಿಶ್ವಾಸವನ್ನೂ ಉಂಟು ಮಾಡಬೇಕಾಗಿ ಘನಸರಕಾರವನ್ನು ಬೇಡುವವನಾಗಿದ್ದೇನೆ.

ವೈಸರಾಯರ ಭಾಷಣದ ಸಾರ.

ಕಳೆದ ಒಂದನೆಯ ತಾರೀಕಿನಲ್ಲಿ ಪ್ರಾರಂಭಿಸಿದ ಎಸೆಂಬ್ಲಿಯಲ್ಲಿ ವೈಸರಾಯರು ಹಿಂದೂ ದೇಶದಲ್ಲಿ ತೃತೀಯ ಚಕ್ರಗೋಷ್ಠಿಯ ಪರಿಣಾಮದಂತೆ ಹೊಸ ಸರಕಾರವನ್ನು ಏರ್ಪಾಡುಮಾಡುವ ವಿಚಾರಗಳ ಕುರಿತು ಭಾಷಣವನ್ನಿತ್ತರು—"ಹಿಂದೀ ಹೊಸ ಸರಕಾರದ ವಿಚಾರದಲ್ಲಿ ಯಾವ ತೊಂದರೆಗಳೂ ಇರಲಿಕ್ಕಿಲ್ಲ. ಸಂಯುಕ್ತ ರಾಜ್ಯಾಧಿಪತ್ಯದ ವಿಷಯ ಜಾಗ್ರತೆಯೂಗಿಯೂ ಸಾಂಗವಾಗಿಯೂ ನಡೆಯುತ್ತದೆ. ಈಗ ಈ ಹೊಸ ಸರಕಾರದ ಕ್ರಮಗಳ ಭರದಲ್ಲಿ ನಿಜವಾಗಿಯೂ ದೇಶೀಯ ಜಳವಳದ ಮುಖಂಡರು ಸಿಲುಕಿ ಒದ್ದಾಡಲಿಕ್ಕಿದ್ದಾರೆಂಬುದು ನನಗೆ ತುಂಬಾ ಭಾವನೆಯಿದೆ. ಮೂರನೆಯ ಚಕ್ರಗೋಷ್ಠಿಯಲ್ಲಿ ಎಷ್ಟೆಲ್ಲಾ ಭೇದಭಾವಗಳಿದ್ದರೂ ಅವುಗಳನ್ನು ಇತ್ಯರ್ಥಮಾಡಿಕೊಂಡು ಬಂದುದು ಯೋಗ್ಯವಾದ ವಿಷಯ. ಅಲ್ಲದೆ ಅಲ್ಲಿ ಆದ ತೀರ್ಮಾನದಂತೆ ಹೊಸ ಸರಕಾರದ ವಿಚಾರಂಗಳೆಲ್ಲಾ "ವೈಟ್‌ಪೇಪರು" ಪಾರ್ಲಿಮೆಂಟಿನಿಂದ ಹೊರಹೊರಡುವಾಗ ತಿಳಿಯುತ್ತದೆ. ಇದರ ಕಾರ್ಯಕ್ರಮವನ್ನು ಯಥಾಪ್ರಕಾರವಾಗಿ ನಡೆಯಿಸುವುದಾದರೆ ಹಿಂದೀಯರ ಸಹಾಯವು ಅತ್ಯಗತ್ಯ. ಈ "ವೈಟ್ ಪೇಪರ" ನಲ್ಲಿ ಸಂಸ್ಥಾಫಿಕ ಸರಕಾರದ ವಿಚಾರಗಳೂ ಕೇಂದ್ರದಲ್ಲಿರಬೇಕಾದ ಸಂಯುಕ್ತಾಧಿಪತ್ಯದ ವಿಚಾರಗಳೂ ಕ್ರಮವಾಗಿ ಬರೆಯಲ್ಪಡುವವು. ಈ ಕಾರ್ಯಕ್ರಮಗಳು ನಡೆಯುವ ಮೊದಲು "ರಸರ್ವ್" ಬೇಂಕೊಂದು ಖಂಡಿತವಾಗಿಯೂ ತೆರೆಯಲ್ಪಡುವುದು. ಆರ್ಥಿಕ ವಿಚಾರದಲ್ಲಿ ಊರ್ಜಿತ ಸ್ಥಿತಿಯನ್ನು ತರುವುದಕ್ಕೆ ಪ್ರಯತ್ನ ಮಾಡಲ್ಪಡುವುದು. ದೇಶೀಯ ಜಳವಳದ ವಿಚಾರವಾದ ಕಾನೂನುಗಳು ಈ ಪರಿವರ್ತನಾಕಾಲದಲ್ಲಿ ಇದ್ದಂತೆಯೇ ಇರುವುವು."

ಗಾಂಧಿಜಿಯವರ ಬಂಧ ವಿಮೋಚನೆ.

ಗಾಂಧಿಜಿಯವರನ್ನು ಬಂಧ ವಿಮೋಚನೆಮಾಡುವ ವಿಚಾರದಲ್ಲಿ "ಮ್ಯಾಂಚೆಸ್ಟರ್ ಗಾರ್ಡಿಯನ್" ಎಂಬ ಪತ್ರಿಕೆಗೆ ಬ್ರಿಟಿಷ್ ಮುಖಂಡರೊಬ್ಬರು ಸಹಿ ಹಾಕಿ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದರ ಸಾರ ಹೀಗಿದೆ—ಇಂಡಿಯದ ಹೊಸ ಸರಕಾರದ ಕ್ರಮಗಳು ಇಲ್ಲಿಯೂ (ಇಂಗ್ಲೆಂಡಿನಲ್ಲಿಯೂ) ಹಿಂದೂಸ್ಥಾನದಲ್ಲಿಯೂ ಚರ್ಚಿಸಲ್ಪಡಲಿಕ್ಕಿವೆ. ಇದಕ್ಕೆ ಅನ್ಯೋನ್ಯ ಪ್ರೀತಿಯೂ, ಶಾಂತಿಯೂ ಅಗತ್ಯ. ಅಂತಹ ಪರಿಸ್ಥಿತಿಯು ಗಾಂಧಿಜೀಯವರು ಅವರ ಅನುಯಾಯಿಗಳು ಕಾರಾಗೃಹದಲ್ಲಿರುವ ತನಕ ಬರುವುದೇ ದುರ್ಲಭ. ಇವರನ್ನು ಬಿಡುಗಡೆ ಮಾಡುವ ಮೊದಲು ಈ ಹೊಸ ಸರಕಾರದ ಕ್ರಮಗಳನ್ನು ಎಂದೂ ಸರಿದೃಷ್ಟಿಯಿಂದ ಕಾಣಲಿಕ್ಕಿಲ್ಲ. ಮುಂದಿನ ಅವರ ಸಹಾನುಭೂತಿಗೆ ತಡೆಯನ್ನು ತಂದೊಡ್ಡಿದಂತಾಗುತ್ತದೆ. ಪಾರ್ಲಿಮೆಂಟಿನಲ್ಲಿ ಎತ್ತಿದ ವಿಚಾರವನ್ನು ಕಾರ್ಯರೂಪದಲ್ಲಿ ತರುವುದು ಅಸಾಧ್ಯವಾಗಿ ಕಂಡುಬಂದೀತು. ಅವರ ಮನಸ್ಸನ್ನು ಅವರ ಕಷ್ಟಗಳ ಮೇಲೆಯೇ ಆಕರ್ಷಿಸಿ ನಮ್ಮನ್ನು ದೂರವೂಡಿದಂತಾಗುತ್ತದೆ. ಅಲ್ಲದೆ ಗಾಂಧಿಜೀಯವರನ್ನು ಬಿಡುಗಡೆಮಾಡುವುದು ಅತ್ಯಗತ್ಯವೆಂದು ಚಕ್ರಗೋಷ್ಠಿಯಲ್ಲಿ ಪ್ರಾಮುಖ್ಯ ಭಾಗವನ್ನು ವಹಿಸಿದ ಸರ್ ಪ್ರಭಾಶಯಕರೇ ಹೇಳುತ್ತಾರೆ. ಆದರೆ ಬಂಧ ವಿಮೋಚನೆಯಿಂದುಂಟಾಗುವ ಕಷ್ಟಗಳ ಪರಿಚಯವು ನನಗಿದೆ. ಆದರೂ ಹಿಂದೀ ಬ್ರಿಟಿಷರೊಳಗೆ ಐಕ್ಯಭಾವವು ಮೂಡಬೇಕಾದರೆ ಈ ಕೈದಿಗಳ ಬಂಧ ವಿಮೋಚನೆಯು ಅತ್ಯಗತ್ಯ. ಇದನ್ನು ಮನಸ್ಸಿಗೆ ತೆಗೆದುಕೊಳ್ಳದೆ ಇದ್ದಲ್ಲಿ ಕೊನೆಗೆ ಗಂಡಾಂತರವು ಬಾರದೆ ಇರದು.

ನನ್ನ ಕನ್ಯಾಗುರುಕುಲದ ಪ್ರಥಮ ದಿವಸ.

ಕುವೂರಿ ಪದ್ಮಾವತಿ, ಕನ್ಯಾಗುರುಕುಲ, ದೆಹರಾಡೂನ್.

ಪ್ರಾತಃಕಾಲದ ಸುಮಾರು ೧೦ ಘಂಟೆಯ ವೇಳೆಯಾಗಿತ್ತು. ಆದಿತ್ಯವಾರದ ದಿನವಾದ ಕಾರಣ ಶಾಲೆಯೂ ಮುಚ್ಚಿ ಹೋಗಿತ್ತು. ಆದುದರಿಂದ ನನ್ನ ಆನಂದಕ್ಕೆ ವೇರೆಯೇ ಇಂಬಿಲ್ಲ. ನಾನೂ ಪರಮಾನಂದದಿಂದ ಓದುಗಾರಿಕೆಗೆ ತಿಲಾಂಜಲಿಯನ್ನು ಕೊಟ್ಟು, ತಾಯಿಗೆ ಮನೆ ಕೆಲಸದಲ್ಲಿ ಸಹಾಯವನ್ನು ಕೂಡುವುದಕ್ಕಾಗಿ ಅಡಿಗೆಯ ಮನೆಯನ್ನು ಹೊಕ್ಕೆನು. ಅಲ್ಲಿ ಕೆಲಸ ಮಾಡಲಾರಂಭಿಸಿ, ಕೇವಲ ಐದಾರು ನಿಮಿಷಗಳಾಗಿರಬಹುದು. ಅಷ್ಟರಲ್ಲಿಯೇ ನನ್ನ ಪಿತೃದೇವನು ನನ್ನನ್ನು ಕರೆದರು. ಕರೆಯುವುದಕ್ಕೆ ಕಾರಣವನ್ನರಿಯೆ, ಬಹಳ ವಿಸ್ಮಯಚಿತ್ತಳಾಗಿ ತಂದೆಯವರ ಸವಿಾಪಿಸಿದೆನು. ಅವರು ನನ್ನ ವಿಸ್ಮಯ ಮುದ್ರೆಯನ್ನು, ನೋಡಿ ಮುಗುಳ್ನಗೆ ನಗುತ್ತಾ "ಮಗೂ, ನಿನ್ನ ಭಾಗ್ಯ ಭಾಸ್ಕರನು ಉದಯನಾದನು. ಈ ಪತ್ರವನ್ನೋದು" ಎಂದು ಹೇಳುತ್ತಾ ನನಗೊಂದು ಪತ್ರವನ್ನಿತ್ತರು. ನನ್ನ ಆಶ್ಚರ್ಯವು ಎಷ್ಟಡನೇ ಮೆಟ್ಟನ್ನು ಹತ್ತಿತು. ಕುತೂಹಲವೂ ವಿಸ್ಮಯದ ಸಂಗಾತಿಯಾಯಿತು. ಆದುದರಿಂದ ಕಳವಳಚಿತ್ತದಿಂದ ಪತ್ರದಲ್ಲಿರುವ ಭಾವಗಳನ್ನು ಮನದಲ್ಲಿ ತುಂಬಲಾರಂಭಿಸಿದೆನು. ಆ ಪತ್ರವು ಕಾಂಗ್ರಿ ಗುರುಕುಲ ವಿಶ್ವವಿದ್ಯಾಲಯದ ಗವರ್ನರರದಾಗಿತ್ತು. ಅದರಲ್ಲಿ "ನನ್ನನ್ನು ಕನ್ಯಾಗುರುಕುಲಕ್ಕೆ ಬೇಗನೇ ಕರೆದುಕೊಂಡು ಬರುವಂತೆ" ಬರೆದಿದ್ದರು. ನಾನಾದರೋ ಪತ್ರವನ್ನೋದಿ ಆನಂದಾಂಬುಧಿಯಲ್ಲಿ ತೇಲಾಡಲಾರಂಭಿಸಿದೆನು. ನನ್ನ ಹಾಗೆ ಈ ಸಂಸಾರದಲ್ಲಿ ಬೇರೆ ಯಾರೂ ಸುಖಿಗಳಿಲ್ಲವೆಂದು ತೋರುತ್ತಿತ್ತು. ಆ ದಿನದಿಂದ ನನ್ನ ಹೆಪ್ಪೆಗಣ್ಣು ಕೊನೆಯಿರಲಿಲ್ಲ. ಏನೆತ್ತೇನು ಓದುಗಾರಿಕೆಯಲ್ಲಿಯೂ ಮನವಿಶುತ್ತಿರಲಿಲ್ಲ. ಯಾವಾಗಲೂ ಕಲ್ಪನಾಕಾನನದಲ್ಲಿ ವಿಹರಿಸುತ್ತಿದ್ದೆನು. ಯಾವಾಗಲಾದರೂ ತಾಯಿ ತಂದೆಯರು ಬೈದರೆ ಅಥವಾ ಸೋದರಿಯರ ಸಂಗಡ ಜಗಳವಾಡಿದರೆ, ನನ್ನನ್ನು ಬೇಗನೆ ಗುರುಕುಲಕ್ಕೆ ಮುಂಟ್ಟಸೆಂದು ಪರಮೇಶ್ವರನ್ನು ಬೇಡುತ್ತಿದ್ದೆನು.

ಅಂತೂ ಇಂತೂ ನನ್ನ ವಾಮಿಕ ಪರೀಕ್ಷೆಯು ಮುಗಿಯಿತು. ಗುರುಕುಲಕ್ಕೆ ತೆರಳುವ ಉತ್ಸಾಹದಲ್ಲಿ ಮೈಮರೆಯುತಿರುವ ಕಾರಣ, ನಾನು ಓತನ ಪಾತನದಲ್ಲಿ ಜೆನ್ನಾಗಿ ನಿಗಾವಹಿಸಲಿಲ್ಲ. ಆದುದರಿಂದ ನನ್ನ ಉತ್ತರ ಪತ್ರಗಳು ಸಂತೋಷಪ್ರದವಾಗಿರಲಿಲ್ಲ. ಆದರೆ ನನ್ನನ್ನ ಫಲತಾಂಶದ ಚಿಂತೆಯೂ ಕಾಡಿಸಲಿಲ್ಲ.

ಕಟ್ಟಕಡೆಗೆ ಒಂದು ದಿನ ನನ್ನ ಪ್ರಸ್ಥಾನದ ವೇಳೆಯು ಸಮೀಪಿಸಿತು. ನನ್ನ ಸ್ನೇಹಮಯೀ ಜನನಿ ನನ್ನನ್ನು ಯಾತ್ರೆಯ ತಯ್ಯಾರಿನಲ್ಲಿ ನಿಮಗ್ನಳಾಗಿದ್ದಳು. ಸಖೀ ಬಂಧು ಬಾಂಧವರ ಸಂಗಡ ಸುಖದ ಸಲ್ಲಾಪದಲ್ಲಿ ಸಂಲಗ್ನಳಾಗಿರುವ ನನಗೀ ವಿಷಯದಲ್ಲಿ ತೊಂದರೆ ತೆಗೆದುಕೊಳ್ಳುವುದಕ್ಕೆ ಸ್ವಲ್ಪವೂ ಬಿಡುಗಡೆಯಿರಲಿಲ್ಲ. ಪ್ರಭಾತದ ಸುಮಧುರ ವೇಳೆಯಲ್ಲಿ ನಾನು ನನ್ನ ಜನನೀ, ಜನಕನೊಡನೆ ಮತ್ತು ಇತರ ಪರಿವಾರದವರೊಡನೆ ಮನೆಯಿಂದ ಹೊಂಹೊರಟೆನು. ಮೋಟಾರ್ನ್ನು ಹತ್ತುವ ವೇಳೆಯೂ ಹತ್ತಿರ ಬಂತು. ಪ್ರತ್ಯೇಕ ಕಾಲದಲ್ಲಿಯೂ ಪಿತನ ಅನುಗಾಮಿನಿಯಾಗಿರುವ ಜನನಿಯೂ ಒಬ್ಬ ಆದರ್ಶಮಾತೆಯಂತೆ ಗಂಭೀರಭಾವದಿಂದ ಉಪದೇಶಾವೃತಿಯನ್ನು ನನ್ನ ನೋಲೆ ಸುರಿಸಿ, ನನ್ನನ್ನು ಪುನೀತಳನ್ನಾಗಿ ಮಾಡಿದಳು. ನಾನೂ ಮಾತೆಯ ಗಂಭೀರ ಭಾವಮಯ ಉಪದೇಶವನ್ನು ಮೌನಭಾವದಿಂದ ಶಿರಸಾವಹಿಸಿದೆನು. ನಾನಾದರೋ ನನ್ನ ಮಾತೆಯ ಆದರ್ಶವನ್ನು ನೋಡಿ ಒನ್ಮೊಮ್ಮೆ ವಿಸ್ಮಯವಾರಿಧಿಯಲ್ಲಿ ಮುಳುಗಿ ಹೋಗುತ್ತಿದ್ದೆನು. ಬಹಳ ಮಂದಿ ನಮ್ಮ ಹಿತಚಿಂತಕರು ಮತ್ತು ನೆಂಟರಿಸ್ಟರು ನನ್ನನ್ನು ಗುರುಕುಲಕ್ಕೆ ಕಳುಹಿಸಲು ನಿಷೇಧಿಸುತ್ತಿದ್ದರು. ಆದರೆ ಈ ನಿಶ್ಚಯವನ್ನು ದೃಢತೆಯು ಸೂತ್ರದಲ್ಲಿ ಸೂತ್ರಿಸುವವಳು ನನ್ನ ಜನನಿಯೆಂದರೆ ಅತಿಶಯೋಕ್ತಿಯಾಗಲಕ್ಕಿಲ್ಲ. ಆದುದರಿಂದ ನನ್ನ ತಾಯಿಯು ನನ್ನೀ ಪ್ರಸ್ಥಾನದಲ್ಲಿ ಪೂರ್ಣ ಸಹಮತಳಾಗಿದ್ದಳು.

ಸರ್ವರಿಗೂ ಯಥಾವಿಧಿಯಾಗಿ ನಮಸ್ಕರಿಸಿ, ಮೋಟರನ್ನು ಹತ್ತಿದೆನು. ಕೊಡಗಿನ ಮಂದಾಕಿನಿಯೂದ ಕಾವೇರಿ ನದಿಯ ಅನುಪಮ ಸೌಂದರ್ಯವನ್ನೂ, ವನ, ಗಿರಿ, ಕ್ಷೇತ್ರಗಳ ಲಾವಣ್ಯವನ್ನೂ, ಭಾರತ ವರ್ಷದ ಸ್ಕಾಟ್ಲೆಂಡನ್ನು ಪಾರಂಗತವಾಗಿ ನೀರೀಕ್ಷಿಸುತ್ತಾ, ಕಟ್ಟ ಕಡೆಗೆ ಮನದಲ್ಲಿಯೇ ನಮಸ್ಕರಿಸಿ, ರೈಲನ್ನು ಹತ್ತಿದೆನು.

ನಾವಿಬ್ಬರಿಗೆ ಎಂದರೆ ನನಗೆ ಮತ್ತು ಜನಕನಿಗೆ ಯಾತ್ರೆಯಲ್ಲಿ ವಿವಿಧ ಪ್ರಕಾರದ ವಿಪತ್ತಿಗಳನ್ನು ಸಹಿಸಬೇಕಾಗಿ ಬಂತು. ಡಿಲ್ಲಿಯನ್ನು ಮುಟ್ಟಿದ ನಂತರ ಮತ್ತಷ್ಟು ಕಷ್ಟಗಳಿಂದ ಪೀಡಿತರಾಗಬೇಕಾಯಿತು. ಏಕೆಂದರೆ ನಾವಿಬ್ಬರೂ ಭಾರತ ಭೂಮಿಯ ಬಿಂಬಾದ ಹಿಂದೀಯಲ್ಲಿ ನಿಃಕ್ಷರ ಕುಕ್ಷಿಗಳಾಗಿದ್ದೆವು. ಉತ್ತರ ಹಿಂದೂಸ್ಥಾನವು ನಮ್ಮ ದಕ್ಷಿಣ ಹಿಂದೂಸ್ಥಾನದಂತಿರುವುದಿಲ್ಲ. ಇಲ್ಲಿಯ ಸರ್ವಸಾಧಾರಣರಾಗಿರುವ ಜನರು ಆಂಗ್ಲೇಯ ಭಾಷೆಯಲ್ಲಿ ಪರಿಚಿತರಾಗಿರುವುದಿಲ್ಲ. ಏದರೆ ನಮ್ಮ ದಕ್ಷಿಣ ಭಾರತದಲ್ಲಿಯೂದರೋ, ತನ್ನ ಗುಲಾಮಗಿರಿಯ ಪಾಂಡಿತ್ಯವನ್ನು ತೋರಿಸಲೋಸುಗವೋ ಎಂಬಂತೆ ಭಿಕ್ಷುಕನೂ ಕೂಡಾ ಶಾಧಾರಣ ಮಟ್ಟಿಗೆ ಇಂಗ್ಲೀಷಿನಲ್ಲಿ ಮಾತಾಡಬಲ್ಲನು. ಆದುದರಿಂದ ಗುಲಾಮರಾದ ನಮಗೆ ಉತ್ತರಭಾರತದಲ್ಲಿ ಇಂಗ್ಲೀಷಿನಲ್ಲಿ ಮಾತಾಡುವವರ ಸಂಖ್ಯೆಯು ಅಲ್ಪವಾದ ಕಾರಣ ಮತ್ಕಷ್ಟು ಕೊಂಚವೆಯೂಯಿತು, ದಕ್ಷಿಣ ಭಾರತದ ಹೊಟೇಲಿನ ಆಳು ಡ್ರೈವರು ಮೊದಲಾದ ಮಹಾಶಯರೆಲ್ಲರೂ ಇಂಗ್ಲೀಷಿನಲ್ಲಿ ಪರಿಚಯವುಳ್ಳವರಾಗಿರುತ್ತಾರೆ. ಆದರೆ ಉತ್ತರ ಭಾರತವರ್ಷದಲ್ಲಿ ಈ ಕೋಟಿಯ ಸಜ್ಜನರಲ್ಲಿ, ಇಂಗ್ಲೀಷಿನಿಂದ ಪರಿಚಿತರಾಗಿಯುವವರು, ಅತ್ಯಲ್ಪ ಸಂಖ್ಯೆಯಲ್ಲಿ ಇರುತ್ತಾರೆ. ಈ ಸಾರಾಂಶದಿಂದ ನಮ್ಮ ದಕ್ಷಿಣ ಹಿಂದೂಸ್ಥಾನದಲ್ಲಿ ಶಿಕ್ಷಣೆಯು ಹೆಚ್ಚು ಪ್ರಚಾರವಿದೆಯೆಂದು, ನಿಶ್ಚಯವಾಯಿತು. ಇಲ್ಲಿಯವರು ಹೆಚ್ಚಾಗಿ ದೇಶೀ ಭಾಷೆ ಎಂದರೆ ಹಿಂದೀ, ಉರ್ದುಗಳಿಂದ ಪರಿಚಿತರಾಗಿರುವರು. ಅಂತೂ ಇಂತೂ ರಾಮನಾಮವನ್ನು ಜಪಿಸುತ್ತಾ ದೆಹರಾಡೂನಿನ ಕನ್ಯಾಗುರುಕುಲದ ದರ್ಶನವಾಯಿತು

ನನ್ನ ಆನಂದವೆಲ್ಲವೂ ನನ್ನ ಮನ ಮೆರ್ಕಟವು ಕಲ್ಪಿಸಿರುವ ಕಲ್ಪನೆಗಳೆಲ್ಲವೂ, ಕನ್ಯಾಗುರುಕುಲವನ್ನು ನೋಡಿ ವಾಯವಾದವು. ನನ್ನ ಕಲ್ಪನೆಗಿಂತ ಪ್ರತಿಕೂಲವಾದ ದೃಶ್ಯಗಳು ಕಂಗೊಳಿಸಿದವು ನಾನು ಮನೆಯಲ್ಲಿ ಗುರುಕುಲದ ಸಂಬಂಧವಾಗಿ ಏನೇನೋ ಯೋಚಿಸಿದ್ದೆನು. ನಾನು ಗುರುಕುಲವನ್ನು ನಮ್ಮ ಮಾಡಿಕೇರಿ ಕಾನ್ವೆಂಟಿನ ಪ್ರತಿಕೃತಿಯೆಂದರಿತ್ತಿದ್ದೆನು. ಗುರುಕುಲದ ಭವನವು ಭವ್ಯ ಮತ್ತು ಮನೋಹರವಾಗಿರಬಹುದೆಂದು ಕಲ್ಪಿಸಿದ್ದೆನು. ಕೊಡಗಿನ ಕಾನ್ವೆಂಟಿನಲ್ಲಿ ಕಲಿಯುತ್ತಿದ್ದ ಕನ್ಯೆಯನ್ನು ನೋಡಿರುತ್ತೀನೆ ಅಲ್ಲಿ ವ್ಯಾಸಂಗಿಸುವ ಬಾಲಕಿಯು ಸ್ವಭಾವನೇ ಏಸರೀತವಾಗಿರುತ್ತದೆ. ಲಾರ್ಡ್ ಮೆಕಾಲೆಯವರ ಇಂಗ್ಲಿಷ್ ಶಿಕ್ಷಣೆಯು ಪರಾಕಾಷ್ಠೆಯನ್ನು ನೋಡಲಪೇಕ್ಷಿಸುವವರು, ಕಾನ್ವೆಂಟುಗಳಲ್ಲಿ ನೋಡಬಹುದು. ಲಾರ್ಡ್ ಮೆಕಾಲೆಯವರು ಇಂಗ್ಲೀಷ್ ಶಿಕ್ಷಣೆಯಿಂದ ಭಾರತೀಯರನ್ನು ಸರ್ವದಾ ದಾಸರನ್ನಾಗಿಡಲಿಕ್ಕೆ ಕೆಳಗೆ ಬರೆದಿರುವ "English Education would train up a class of persons. Indians in blood and colour, but English in taste, in opinions, in words and in intellect" ಎಂಬ ಮೋಹಿನಿ ಮಂತ್ರಕ್ಕನುಕೂಲವಾಗಿ ಕುಣಿಯುವ ದೇವಿಯರನ್ನು ನಿರೀಕ್ಷಿಸಿ, ನನ್ನ ಬಾಯಿಯಲ್ಲಿ ನೀರು ಒರುತ್ತಿತ್ತು. ಇವರ ದುಂದುಗಾರಿಕೆ ಮತ್ತು ಬೂಟಾಟಿಕೆಗಳನ್ನು ನೋಡಿ, ನನ್ನ ಮನಸು ಕಾನ್ವೆಂಟಿನ ಕಡೆ ತಿರುಗಿತ್ತು. ಈ ಸಂಸಾರದಲ್ಲಿ ಶ್ರೇಯ, ಪ್ರೇಯಗಳೆಂಬ ಎರಡು ವರ್ಗಗಳಿರುವುವಷ್ಟೆ. ಶ್ರೇಯ ವರ್ಗವನ್ನು ಉತ್ತಮವೆಂದು ಸರ್ವರೂ ಒಪ್ಪುವರಾದ್ದರೂ, ಅದರ ಪಥಿಕರ ಸಂಖ್ಯೆಯು ಬೆಳಿನಲ್ಲಿ ಎಣಿಸುವಷ್ಟಿರುವುದು. ಮಿಕ್ಕವರೆಲ್ಲರೂ ಪ್ರೇಯ ವರ್ಗಾವಲಂಬಿಗಳೇ. ಈ ವರ್ಗದ ಪಥಿಕರನ್ನೂ ಗಣನೆಗೆತ್ತು. ಪ್ರೇಯ ವರ್ಗದ ಬೂಟಾಟಿಕೆಯು ಮೊಯಿಲ್ಲಿ ನಿಲಕದಂಥಾ ಮಹಾತ್ಮಳು ನಾನಾಗಿರಲಿಲ್ಲ. ಅಂತೂ ಇಂತೂ ನಾನೊಬ್ಬ ಕ್ಷುದ್ರ ಬಾಲಿಕೆಯು. ಒಂದೊಂದು ಸಲ ದೊಡ್ಡ ಧೋಣಿಗಳೂ, ಮುನಿಗಳೂ ಶ್ರೇಯ ವರ್ಗವನ್ನು ತೊರೆದು ಪ್ರೇಯ ಪಥದ ಪಥಿಕರಾಗಿರುವಾಗ— ನನ್ನೀ ಮನ ಮರ್ಕಟದ ದೋಷವನ್ನು ಪಾಠಕ ಮಹಾಶಯರು ಕ್ಷಮಿಸಬೇಕಾಗಿ ಕರ ಜೋಡಿ ಬೇಡುತ್ತೇನೆ. ಈ ಕಡೆ ನನ್ನ ಮನಸು ಕಾನ್ವೆಂಟಿನ ವಿಲಾಸಮಯ ಜೀವನದ ಕಡೆ ಸೆಳೆಯುತಿತ್ತು. ಆದರೆ ಒಂದು ಕಡೆ ಪರಮ ಪೂಜ್ಯ ಪಿತೃದೇವನ ಹೆದರಿಕೆಯಿಂದ ಮನದಾಸೆಗಳನ್ನು ಮನದಲ್ಲಿಯೇ ಬಚ್ಚಿಟ್ಟು ಕೊಳ್ಳಬೇಕಾಗುತ್ತಿತ್ತು. ನನ್ನ ಜನಕನಿಗಾವರೋ ಹಿಂದೂ ಗೌರವದ ಕಡೆಗೆ ಬಹಳ ಪ್ರೀತಿಯಿತ್ತು. ಅಂಥಾ ದೆಸೆಯಲ್ಲಿ ತನ್ನ ಪುತ್ರಿಯರು ಕಾಯ ಲೇಡಿಗಳಂತೆ ಕುಣಿಯುವುದನ್ನು ಹೇಗೆ ತಾನೇ ಸಹಿಸಿಯಾರು. ಅವರಮನದಲ್ಲಿ ಕಾನ್ವೆಂಟು ಶಿಕ್ಷಣದ ಎಂದರೆ ಪಶ್ಚಿಮಾಯ ವ್ಯಾಸಂಗದ ಕಡೆ ಎಳ್ಳಷ್ಟು ಸದಭಿಪ್ರಾಯವಿರಲಿಲ್ಲ. ಆದುದರಿಂದ ಇಂಥಾ ಪರಿಸ್ಥಿತಿಯಲ್ಲಿ ನಾನು ಕಾನ್ವೆಂಟಿಗೆಹೋಗುವ ಆಶೆಯು ಮೊಲಕ್ಕೆ ಕೊಂಬು ಬರುವಂತೆ ಅಸಂಭವವಾಗಿತ್ತು. ನನ್ನ ಸೌಭಾಗ್ಯದಿಂದ ಮತ್ತು ಜನಕನ ಅನಾರ ಕೃಪೆಯಿಂದ ಮಂಡಿಕೇರಿಯಲ್ಲಿ ಓದಲು ಸಮರ್ಥಳಾದೆನು. ಆದ ಧರಿಂದ ನಮ್ಮನ್ನು ಹುಡುಗರ ಹೈಸ್ಕೂಲಿಗೆ ಕಳುಹಿಸುವುದವರಿಗೆ ಅಭೀಷ್ಟವಾಗಿತ್ತು. ಕನ್ಯಾಗುರು ಕುಲಕ್ಕೆ ಹೋಗುವ ಪ್ರಸ್ತಾಪವು ನಡೆದಿದ್ದ ಕಾರಣ ನನಗೆ ಹೈಸ್ಕೂಲಿನಲ್ಲಿಯೂ ಬಹಳ ಸಮಯದ ವರೆಗೆ ಇರಬೇಕಾಗಿ ಬರಲಿಲ್ಲ.

ಹೊಂಗಿನ ವಾತಾವರಣದಲ್ಲಿ ಇಷ್ಟು ಸಮಯದ ವರೆಗೆ ಇದ್ದ ಕಾರಣ, ನಾನು ಬಾಲಕೀಯ ದೃಷ್ಟಿಬಿಂದುವಿನಿಂದ ರಚಿಸಲ್ಪಟ್ಟ ಇತಿಹಾಸಗಳಿಂದ ಸಂಪೂರ್ಣ ಅನಜ್ಞಳಾಗಿದ್ದೆನು ಆದರೆ ವಿದೇಶಿಯರ ಕರ ಕಮಲಗಳಿಂದ ಬರೆಯಲ್ಪಟ್ಟ ಇತಿಹಾಸಗಳ ಪ್ರಭಾವದಿಂದ ನಮ್ಮ ಪೂರ್ವಜರು ಮೂರ್ಖ ಮತ್ತು ವನವಾಸಿಗಳಾಗಿದ್ದರೆಂತಾಗಿತ್ತಿದ್ದೆನು. ಆದುದರಿಂದ ನನ್ನ ಮನದಲ್ಲಿ ನನ್ನ ಪೂರ್ವಜರ ಕಡೆ ಸ್ವಲ್ಪವೂ ಸನ್ಮಾನದ್ಭಾವವು ಮೊಳೆತಿರಲಿಲ್ಲ. ತಾಯಿಯವರು 'ಗುರು ಕುಲದಲ್ಲಿ ಪ್ರಾಚೀನ ಶಿಕ್ಷಣ ಕ್ರಮಕ್ಕನುಸಾರವಾಗಿ ಶಿಕ್ಷಣೆಯು ದೊರೆಯುತ್ತದೆ' ಎಂದು ತಿಳಿಸಿದ್ದರು.

ಒಂದು ಸಲದ ಘಟನೆಯು ನನಗೆ ಚೆನ್ನಾಗಿ ನೆನಪಿಗೆ ಬರುತ್ತಿದೆ. ಅದೇನೆಂದರೆ ನಾನು ಎಂಟನೆಯ ತರಗತಿಯಲ್ಲಿ ಕಲಿಯುತ್ತಿದ್ದೆನು. ಇತಿಹಾಸದ ವೇಳೆಯಾಗಿತ್ತು. ಒಬ್ಬ ವಿದ್ಯಾರ್ಥಿಯು ಇತಿಹಾಸದ ಅಧ್ಯಾಪಕರನ್ನು—"ಸ್ವರಾಜ್ಯಕ್ಕಾಗಿ ಮಹಾತ್ಮ ಗಾಂಧಿಯವರ ಚಳವಳಿಯು ಸದುದ್ಯುಕ್ತವೇ" ಎಂದು ಪ್ರಶ್ನಿಸಿದನು. ಅದಕ್ಕವರಿತ್ತ ಉತ್ತರವೇನೆಂದರೆ—"ನೊಟ್ಟ ನೆಲದ ಲು ನಮಗೆ ಇಂಗ್ಲಿಷ್ ಸಾಮ್ರಾಜ್ಯದಲ್ಲಿ ಎಷ್ಟು ಸುಖ ವಾಸ್ತವ್ಯದಲ್ಲಿ ಎಷ್ಟು ಸುಖ ವಾಸ್ತವ್ಯವಿದೆಯೆಂಬುವುದನ್ನು ನೋಡು. ನಾವು ಈಸ್ಟ್ ಇಂಡಿಯಾ ಕಂಪೆನಿಯು ಬರುವುದಕ್ಕಿಂತ ಮೊದಲು ಕಳ್ಳಕಾಕರಿಂದೆಷ್ಟು ಪೀಡಿಸಲ್ಪಟ್ಟವರೆಂಬುವುದಕ್ಕೆ ಚಾರಿತ್ರಗಳೇ ಸಾಕ್ಷಿಯಾಗಿವೆ. ಲಾರ್ಡ್ ಕಾರ್ನ್ ವಾಲಿಸ್, ಲಾರ್ಡ್ ವಿಲಿಯಂ ಬೆಂಟಿಂಕ್, ಇವರೇ ಮೊದಲಾದ ಮಹಾತ್ಮರುಗಳಿಲ್ಲದೆ ಹೋಗಿದ್ದರೆ ನಮ್ಮ ದಾವ ದೆಸೆಯೊಗುತ್ತಿತ್ತೆಂಬುವುದನ್ನು ನೀನೇ ಕಲ್ಪಿಸಿಕೊಳ್ಳಿ." ಅಧ್ಯಾಪಕ ಮಹಾಶಯರೀ ದಿವ್ಯ ಉಪದೇಶವನ್ನು ಕೇಳಿ ನನ್ನ ಮನಸು ತಳಮಳಗೊಳ್ಳಲಾರಂಭಿಸಿತು. ಮಹಾತ್ಮಾ ಗಾಂಧಿಯವರು ಈ ಸ್ವರಾಜ್ಯದ ಚಳವಳಿಯನ್ನು ಹೂಡಿ, ನಮ್ಮ ಪ್ರಜಾ ಚಿಂತಕವಾದ ಸರ್ಕಾರಕ್ಕೆ ವಿಘ್ನವನ್ನೇಕೆ ಒದಗಿಸುತ್ತಾರೆಂಬ ವಿವಿಧ ಪ್ರಕಾರದ ಭಾವಗಳು ನನ್ನ ಮನ ಮಂದಿರದಲ್ಲಿ ಜೋರಾರಂಭಿಸಿದವು ನನ್ನ ಮನಸಾಗರವು ಚಾತೆಯ ತರಂಗಗಳಿಂದ ತರಂಗಿತವಾಗಿ ಮತ್ತಷ್ಟು ಕ್ಷುಬ್ಧವಾಯಿತು. ಯಾವಾಗಲೂ ಮಹಾತ್ಮಾಜಿಯವರನ್ನು ಹೊಗಳುವ ತೀರ್ಥರೂಪರ ಮೇಲಾ ನನಗೆ ಸಿಟ್ಟುಬಂತು. ಖಾದಿಯನ್ನು ಧರಿಸುವುದರಿಂದ ಪ್ರಯೋಜನವೇನೆಂದು ಇಲ್ಲವೆಂದು ತೋರಿತು. ನಮ್ಮ ಕುಟುಂಬದವನು ಬಹಳ ಸನ್ನುದಿಂದ ಖಾದಿಯನ್ನು ಧರಿಸುತ್ತಿದ್ದರಾದ್ದರಿಂದ, ನನ್ನ ಮನಸಲ್ಲಿ ಸ್ವದೇಶಿ ಬಟ್ಟೆಗಳ ವೇಲೆ ಪ್ರೀತಿಯ ಭಾವವಿತ್ತಿಲ್ಲ. ನನಗೆ ಹಾದು ವೇಳೆ ವಿದೇಶೀ ಬಟ್ಟೆಗಳನ್ನು ತಂದು ಕೊಡುವವರಿದ್ದರೆ, ನಾನು ಆ ಬಟ್ಟೆಗಳಿಂದ ತಾಗೆಯವೇಷದಲ್ಲಿರುವ ಸವಿಲಿಸಾತೆ ನರಿಳಲು ಹಿಂದೆಗೆಯುತ್ತಿರಲಿಲ್ಲ. ಆದರೆ ನನ್ನೀ ಆಶೆಯನ್ನು ನೆರವೇರಿಸುವವರಿರಲಿಲ್ಲ. ನನ್ನ ಪಿತೃ ದೇವನಾದರೋ ನನ್ನನ್ನು ಖಾದಿಯ ಹೊರತು ಬೇರೆ ಒಟ್ಟೆ ತೊಟ್ಟುಕೊಳ್ಳುವುದಕ್ಕೆ ಘೋರ ನಿಷೇಧಿಸಿದ್ದರು. ಒಂದು ಸಲ ನನ್ನ ಗ್ರಾಮದಲ್ಲೊಂದು ಹಬ್ಬವಿತ್ತು. ಆದರಲ್ಲಿ ನಾನು 'ಬನಾರಸಿಯ ಶೀರೆಯನ್ನು ತೊಟ್ಟುಕೊಂಡು ಹೋದೆನು. ಆದರೆ ಮನದಲ್ಲಿ ತಂದೆಯವರಲ್ಲಿ ನನ್ನನ್ನು ನೋಡಬಿಟ್ಟಾರೆಂಬ ಭಯದಿಂದ ನಡುಗುತ್ತಿದ್ದೆನು. ಪಾಪದ ಭಯವೆಲ್ಲಿಯೂದರೂ ಅಡಗುವುದುಂಟೇ? ಮನೆಗೆ ಹಿಂತಿರುಗಿದನಂತರ ನನ್ನ ಮೇಲೆ ತಂದೆಯವರು ಕಿಡಿ ಕಿಡಿಯಾದರು. ತಾಯಿಯವರ ಮುಂದೆ ನನ್ನದೇನೂ ನಡೆಯುತ್ತಿರಲಿಲ್ಲ. ನನ್ನ ಖಾದಿಯ ಅಸ್ಪೃತಿಗೆ ಮತ್ತೊಂದು ಕಾರಣವಿತ್ತೇನೆಂದ —ಒಂದು ಖಾದಿಯಶೀರೆಯು ಮೌಲ್ಯದಲ್ಲಿ ವಿಲ್ಲಿನ ಬಹಳ ಸುಂದರವಾದ ಶೀರೆಯನು ಕೊಳ್ಳುತ್ತಿತ್ತು. ಈ ಕಾರಣಗಳಿಂದ ನನ್ನ ಮನವು ಮೊದಲೇ ಅಶಾಂತವಾಗಿತ್ತು. ಈಗ ಅಧ್ಯಾಪಕರ ಬುದ್ಧಿವಾದದಿಂದ ಬೆಂಕಿಯಲ್ಲಿ ತುಪ್ಪ ಬಿದ್ದಂತೆ, ನನ್ನ ಪೈಶುನ್ಯ ಭಾವಗಳು ಜಾಗೃತವಾದವು. ನನಗೆ ಕೆಲವು ಹಿತಚಿಂತಕರು ಗುರುಕುಲಕ್ಕೆ ಹೋಗಬೇಡವೆಂತೂ ಹೇಳಿದರೆ ನೀನು ಸನ್ಯಾಸಿನಿಯಾಗುವೆಯೆಂದೂ ಪ್ರಬೋಧನೆಗಳನ್ನ ಹೊಟ್ಟಿದರು. ನನ್ನ ಮನ ರೂಪೀ ದೋಣಿಯು ಈ ಪ್ರಕಾರದ ತರಂಗಗಳಲ್ಲಿ ತೇಲುತ್ತಿ ಅಪ್ಪೋಲಿ ಕಲ್ಲೋಲವಾಗಲಾರಂಭಿಸಿತು.

ಈ ಪ್ರಕಾರವಾಗಿ ಚಿಂತಿತಳಾಗಿ ನಾನು ತಂದೆಯವರಲ್ಲಿ ವಿಷಯವನ್ನೆತ್ತಿದೆನು. ಅವರು ನನ್ನ ಚಿಂತೆಯ ಕಾರಣವನ್ನು ಕೇಳಿದರು. ನಾನು 'ಅಪ್ಪಯ್ಯಾ ಖಾದಿಯನ್ನು ಧರಿಸುವುದರಿಂದ ಲಾಭವೇನು? ಇದರಿಂದ ಹಾನಿಯಲ್ಲದೆ ಬೇರೆ ಏನೂ ಇಲ್ಲ. ನಮಗೆ ಇಂಗ್ಲಿಷರ ಕೈಕೆಳಗೆ ಇರುವುದರಿಂದ ನೊರೆಯಷ್ಟು ಸುಖವು, ದೇಶೀಯ ರಾಜರಿಂದ ಲಭಿಸಲಾರದು. ಇಂಗ್ಲಿಷರಿಂದ ಶಾಸನವು ಬೇರೆಯೊಗಿಬಿಟ್ಟರೆನಷ್ಟು ದೇಶದ ದೆಸೆಯು ಈಸ್ಟ್ ಇಂಡಿಯಾ ಕಂಪೆನಿಯು ಬರುವುದಕ್ಕಿಂತ ವೆಂದಲಿದ್ದಂತೆ ಕೆಟ್ಟುಹೋಗುವುದು. ನಾನು ಗುರುಕುಲಕ್ಕೆ ಹೋಗಲಾರೆನು. ವ್ಯಾಚೀನ ಶಿಕ್ಷಣೆಯಿಂದ ನಾವು ಕಾಡು ಮನುಷ್ಯರಾಗಿಬಿಟ್ಟೇವು' ಎಂದೇ ಹೇಳಿದೆನು. ತಂದೆಯವರು ನನ್ನೀ ಕಾರಣಗಳನ್ನು ಕೇಳಿ ಕೊಂಚ ಹೊತ್ತಿನ ವರೆಗೆ ಮೌನವನ್ನು ಸಾಧಿಸಿದರು. ಅದರ ನಂತರ ನನ್ನ ಕಡೆ ವಿಷಣ್ಣವದನರಾಗಿ ನೋಡುತ್ತಾ "ಗುಲಾಮಗಿರಿಯಲ್ಲಿರುವ ದೇಶದ ಮಕ್ಕಳು ಬುದ್ಧಿಗನುಕೂಲವಾಗಿ ದಿಟವಾದ ಮಾತು ಹೇಳಿದೆ. ಈ ಪ್ರಕಾರದ ನಿನ್ನಂಥಾ ಭಾವೀ ಸಂತತಿಗಳ ವಿಚಾರವೇ, ಬ್ರಿಟಿಷ್ ಶಾಸನದ ಬೇರನ್ನು ದೃಢಪಡಿಸುವ ನೀರು" ಎಂದು ಹೇಳಿ, ನಾನಾ ಪ್ರಕಾರವಾಗಿ ನನಗೆ ಇಂಗ್ಲಿಷ್ ವಿದ್ಯಾಭ್ಯಾಸದ ಹಾನಿಯನ್ನು ವಿವರಿಸಿ, ಗುರುಕುಲದ ವ್ಯಾಸಂಗವನ್ನು ಪ್ರಶಂಸಿಸಿ ಮತ್ತ ಲಾರ್ಡ್ ಮೆಕಾಲೆಯವರ ಸಿದ್ಧಾಂತವನ್ನು ವರ್ಣಿಸಿ ನನ್ನ ಸಂದೇಹವನ್ನು ನಿವಾರಿಸಲೆತ್ನಿಸಿದರು. ಆದರೆ ಆ ಸುದೀರ್ಘ ಉಪದೇಶವು ಮೃತದಲ್ಲಿ ಕೆಲವು ಬಿಂದುಗಳುಮಾತ್ರ ನನ್ನ ಜಾಟು ಬುದ್ಧಿಯನ್ನು ಹೊಕ್ಕ

ಮಹಿಳೆಯೊಬ್ಬಳನ್ನು ನಮ್ಮ ಕಡೆಗೆ ಬರುತ್ತಿರುವುದನ್ನು ನೋಡಿದೆನು. 'ಇವರೇ ಇಲ್ಲಿನ ಆಚಾರ್ಯ (ಪ್ರಿನ್ಸಿಪಾಲ) ರೆಂದು' ತಂದೆಯವರು ಎಚ್ಚರಿಸಿದರು. ಅವರು ನಮ್ಮನ್ನು ಸವಿೂಪಿಸಿದನಂತರ ನಾವಿಟ್ಟರೂ ಸ್ವಾಗತಕ್ಕಾಗಿ ಎದ್ದೆವು ಮತ್ತು ಅಭಿನಂದಿಸಿದೆವು. ಅವರೂ ಪ್ರಸನ್ನ ಮುಖಿಯಾಗಿ ಉತ್ತರವನ್ನು ಕೊಟ್ಟರು. ಮತ್ತು ನಮ್ಮನ್ನು ಕುಳಿತುಕೊಳ್ಳಲು ಆಗ್ರಹಿಸಿದರು. ನಾವೆಲ್ಲರೂ ಕುಳಿತುಕೊಂಡ ನಂತರ ಭೋಜನಾದಿ ವಿಷಯವಾಗಿ ಪ್ರಶ್ನಿಸಿ, ನಮಗ್ಯಾವದಾದರೂ ವಸ್ತುವಿನ ಜರೂರತೆಯಿದೆಯೋ ಎಂದು ಕೋರಿದರು. ತಂದೆಯವರು ಅವರಿಗೆ ಧನ್ಯವಾದವನ್ನರ್ಪಿಸಿ, ಈಗೇನೂ ವಸ್ತುವು ಬೇಕಾಗಿಲ್ಲವೆಂದುಜವಾಬನ್ನಿತ್ತರು. ಅದರ ನಂತರ ಅವರು ನನ್ನ ಕಡೆಗೆ ತಿರುಗಿ ಇಂಗ್ಲಿಷಿನಲ್ಲಿ "ನಿನಗೆ ಹಿಂದಿಯಲ್ಲಿ ಸ್ವಲ್ಪವಾದರೂ ಜ್ಞಾನವಿದೆಯೋ?" ಎಂದು ಪ್ರಶ್ನಿಸಿದರು. ನಾನು ಅದಕ್ಕೆ ನಕಾರದಲ್ಲಿ ಉತ್ತರವನ್ನು ಕೊಟ್ಟೆನು. ಸ್ವಲ್ಪ ಹೊತ್ತಿನ ವರೆಗೆ ತಂದೆಯವರ ಸಂಗಡ ಮಾತುಕತೆ ನಡೆದ ನಂತರ, ಅವರು ನನ್ನನ್ನು ಗುರುಕುಲವನ್ನು ತೋರಿಸಲಿಕ್ಕೆಕರೆದುಕೊಂಡು ಹೋದರು. ಗುರುಕುಲದ ಆಶ್ರಮದಲ್ಲಿ (ಬೋರ್ಡಿಂಗ್) ಬಹಳ ಮಂದಿ ಬಾಲಿಕೆಯರು ಅತ್ಯಿತ್ತ ತಿರುಗಾಡುತ್ತಿದ್ದರು. ಅವರೆಲ್ಲರೂ ತಮ್ಮ ಭ್ರಮಣ ಕಾರ್ಯವನ್ನು ನಿಲ್ಲಿಸಿ, ನನ್ನ ಕಡೆಗೆ ಕುತೂಹಲ ಪೂರ್ಣವಾದ ದೃಷ್ಟಿಯಿಂದ ನೋಡ ತೊಡಗಿದರು. ಮತ್ತು ಪರಸ್ಪರ ಏನೇನೋ ಮಾತಾಡತೊಡಗಿದರು. ನಾನು ಆಚಾರ್ಯಜೀಯವರ ಸಂಗಡ ಆಶ್ರಮದ ಜಗಲಿಯಲ್ಲಿ ಕುಳಿತೆನು.ಅಲ್ಲಿ ಅವರು ನನ್ನ ಮುಂದೆ ಹಾರ್ಮೋನಿಯಮನ್ನು ಇಟ್ಟು ಬಾರಿಸಲು ಹೇಳಿದರು. ನಾನವರ ಆಜ್ಞೆಯನ್ನು ಶಿರಸಾವಹಿಸಿದೆನು. ಅದರನಂತರ ಸ್ವಲ್ಪ ಹೊತ್ತಿನ ವರೆಗೆ ಪ್ರಸ್ತರ ಪ್ರತಿಮೆಯಂತೆ ಅಲ್ಲಿಯೇ ಕುಳಿತುಕೊಂಡಿದ್ದು, ತಂದೆಯವರ ಹತ್ತಿರ ಹೋದೆನು. "ಗುರು ಕುಲವು ಹೇಗಿದೆ" ಎಂದು ಜನರು ಪ್ರಶ್ನಿಸಿದರು.ಅದಕ್ಕೆ ನಾನು ಹೀಗೆಂದು ಉತ್ತರವನ್ನು ಕೊಟ್ಟೆನು—"ಅಪ್ಪಯ್ಯಾ, ಇಲ್ಲಿಯ ಜನರುಬಹಳ ವಿಚಿತ್ರರಾಗಿ ತೋರುತ್ತಾರೆ. ಇಲ್ಲಿ ಎಲ್ಲರೂ ಶುದ್ಧ ಖಾದಿಯನ್ನು ಧರಿಸುತ್ತಾರೆ. ಮತ್ತೊಂದು ಆಶ್ಚರ್ಯಕರವಾದ ಮಾತೇನೆಂದರೆ ಇಲ್ಲಿ ಎಲ್ಲಾ ಹುಡುಗಿಯರು ಕಬ್ಬಿಣದಿಂದ ಮಾಡಲ್ಪಟ್ಟ ಕುಂಡದಲ್ಲಿ ಅಗ್ನಿಯನ್ನು ಪ್ರಜ್ವಲಿಸಿ, ಅದರಲ್ಲಿ ತುಪ್ಪಹೊಯ್ಯುತ್ತಾ ಮಂತ್ರೋಚ್ಚಾರಣೆಯನ್ನು ಮಾಡುತ್ತಾರೆ. ಇದೆಲ್ಲವನ್ನೂ ನೋಡುವಾಗ ಇಲ್ಲಿಯವರು ಅಗ್ನಿಪೂಜಕರೆಂದು ತೋರುತ್ತದೆ. ಇವರು ಮನುಷ್ಯರಲ್ಲ. ನಾನೇ ಇವರ ಮುಂದೆ ಪೆದ್ದಭಟ್ಟಳಾಗಿ ಬಿಟ್ಟಿದ್ದೇನೆ". ತಂದೆಯವರು "ಪಾರ್ಸಿಯರಲ್ಲಿ ಅಗ್ನಿ ಪೂಜೆಯ ಪದ್ಧತಿ ಇರುವುದರಿಂದ, ಇಲ್ಲಿಯವರೂ ಅಗ್ನಿಪೂಜಕರಾಗಿರಬಹುದು. ಆದುದರಿಂದ ಇದರಲ್ಲಿ ಚೋದ್ಯದ ಮಾತೇನು?" ಎಂದುತ್ತರಿಸಿದರು. ಅದಕ್ಕೆ "ಅಪ್ಪಾ, ನಾನು ಹಾಗೆ ಎಂದಿಗೂ ಮಾಡಲಾರೆನು. ನನ್ನಿಂದ ಅಗ್ನಿ ಪೂಜೆಯು ಸಾಧ್ಯವಿಲ್ಲ. ನಾನಾದರೋ ಮೂರ್ತಿ ಪೂಜೆಯನ್ನು ಮಾಡುವವಳು". ಎಂದು ಜವಾಬನ್ನಿತ್ತೆನು.

(ಮುಂದುವರಿಯುವುದು)

ನೋ ಟೀ ಸು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಇದರ ಆಫೀಸಿನಿಂದ.

ಈ ಬ್ಯಾಂಕಿನ ಜನರಲ್ ವಿೂಟಿಂಗು ತಾ. 26—2—1933 ನೇ ಆದಿತ್ಯವಾರ ದಿನ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲಿ ಜವಿೂನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆ. ಇದಕ್ಕೆ ಸಂಘದ ಒಬ್ಬ ಪ್ರತಿಧಿಯನ್ನು ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

ಚರ್ಚಿಸತಕ್ಕ ವಿಷಯಗಳು.

1. ಡೈರೆಕ್ಟರುಗಳ ರಿಪೋರ್ಟು ಮತ್ತು ಲಾಭ ಹಂಚು ವಿಕೆ.

2. ಡೈರೆಕ್ಟರುಗಳ ಮತ್ತು ಅಧ್ಯಕ್ಷರ ಚುನಾವಣೆ.

3. ಸಂಘಗಳ ಮೇಲ್ವಿಚಾರಣೆ ಮತ್ತು ದ್ರವ್ಯ ಸಹಾಯಗಳ ಬಾಬಿನಲ್ಲಿ ಬ್ಯಾಂಕಿನ ಬೈಲಾ ನಂಬರು 4. 28. 31. 32. 33. 35. 36. 37. 38. 39. ಮತ್ತು 47ರ ತಿದ್ದುಪಡಿ.

4. 1932—33ನೇ ಸಂವತ್ಸರದ ಅಂದಾಜು ಬಡ್ಜೆಟ್.

5. ಅಧ್ಯಕ್ಷರ ಅನುಮತಿ ಮೇರೆ ಇತರ ತುರ್ತಿನ ವಿಷಯಗಳು.

6. ತಿಂಡಿತೀರ್ಥಗಳು.

ಸಂಘದಿಂದ ಬ್ಯಾಂಕಿನ ಪ್ರತಿನಿಧಿಯಾಗಿ ಯಾರನ್ನು ಚುನಾಯಿಸಿದ್ದೀರೆಂಬುದನ್ನು ತಾ. 25—2—1933ರ ಒಳಗೆ ನಮಗೆ ತಿಳಿಸಬೇಕಾಗಿ ಕೋರುತ್ತೇನೆ ಹಾಗೆ ವಿೂಟಿಂಗಿಗೆ ಬರುವ ಪ್ರತಿನಿಧಿಗಳ ಹೆಸರನ್ನು ತಿಳಿಸದಿದ್ದರೆ ವಿೂಟಿಂಗಿನ ದಿನ ಬಂದ ಪ್ರತಿನಿಧಿಗೆ ವಿೂಟಿಂಗಿನ ಕಾರ್ಯದಲ್ಲಿ ಭಾಗ ತೆಗೆದುಕೊಳ್ಳಲು ಸಾಧ್ಯವಾಗುವಂತಿಲ್ಲ.

ಮಡಿಕೇರಿ, 31—1—1933. ಯಂ. ಯಂ. ಬಿಳ್ಳಪ್ಪ, (ಗೌರವ ಕಾರ್ಯದರ್ಶಿ.)

ಪೂ ವೆ ಮ್ಮ .

(ಕೊಡಗಿನ ಹುಡುಗಿ)

(ಲೇಖಕ—ಕೆ. ವಿ. ಶಬ್ಬಪ್ಪನವರು)

೧

ಮಡಿಕೇರಿಯ ಸಿರಿಮಲೆಗಳ ಮೇಲೆ
ಬಾಲ ದಿನೇಶನ ಕೋಮಲ ಲೀಲೆ
ಹಸುರಿನ ಕೆನ್ನೆಗೆ ಹೊನ್ನಿನ ಮುತ್ತು
ಕೊಡುತ್ತಿತ್ತು.

ಜನವಿಲ್ಲದ ತಿರುದಾರಿಯರೊಳಾನು
ಮೆಲ್ಲನೆ ನಡೆದಿರೆ, ಪರ್ವತ ಸಾನು
ಅಲೆಯಲೆಯಲೆ ಮುಗಿಲಿಗೆ ಎರಚು;
ವಿೂರಿತ್ತು.

೨

ಸುತ್ತಲು ಕಾಡಿನ ಹೂಗಳು ಕಣ್ಮಿಗೆ
ನಲಿ ನಲಿದುವು ಹೂ ಬಿಸಿಲಲಿ ನುಣ್ಣಗೆ;
ಖಗಗಾನವು ಮೌನವು ಕಡೆದಿತ್ತು;
ಮಿಡಿದಿತ್ತು;

ತಪ್ಪಲ ಮೇಯುವ ಮಂಜಿನ ಮುಂದೆ
ತೇಲುತ್ತಲಿದ್ದುದು ಹಿಂದೆ ಮುಂದೆ
ನಡೆದೆನು ಕೊಡಗಿಗೆ ನಾ ಮನಸೋತು
ವೇಗೋತು.

೩

ನಡೆದಿರೆ ದಾರಿಯ ತಿರುಗಣಿಯಲ್ಲಿ
ಪರ್ವತ ಕಾನನ ಕಂದರದಲ್ಲಿ
ಥಕ್ಕನೆ ಕಂಡಿತು ನನ್ನಯ ಕಣ್ಮಿ
ಮುದ್ದಿನ ಮಲೆಹೆಣ್ಣು !

ಹೆಣ್ಣೆಂಬೆನೆ ? ಅಲ್ಲಾ ! ತಿರು ಹುಡುಗಿ !
ಕೊಡಗಿಗೆ ಕನ್ನಡಿಯೋ ಎನೆ ಬೆಡಗಿ !
ಎದು ವಸಂತಗಳಂದದ ಕೊಡಗಿ !
ಹೊಸ ಹೂ ಆ ಹುಡುಗಿ !

೪

ಬೆಡಗಿನ ಕೊಡಗಿನ ಮಲೆಯಿಂಡೊಯ್ಯನೆ
ತಿರುದೊರೆಯುರುಳುವ ತೆರದಲಿ ರಯ್ಯನೆ
ಕಲ್ಲು ಹಾದಿಯಲಿ ಬಂದಳು ಚಿಮ್ಮಿ,
ಮಿಗವರಿಯೊಲು ಹೊಮ್ಮಿ !

ನಿಂತಳು ಬೆರಗಾಗ್ದೆನ್ನನು ಕಂಡು;
ಅಂತು ನಿಲ್ಲುವುದು ದುಂಬಿಗೆ ಬಂಡು,
ಕಂಗೊಳಿ ನಾನಾ ಚೆಲುವನು ಹೀರಿ
ನಿಂತೆನು ಎದೆ ಹಾರಿ.

೫

ತುಂಬಿದ ಮೊಗ, ಮೈ ತುಳುಕುವ ಕಂಣು
ಕೆನ್ನೆಗಳಿರಡೂ ತೆತ್ತಳೆ ಹಂಣು.
ಕೊಡಗಿಗೆ ಕನ್ನಡಿ ನಿನ್ನಯ ಕೆನ್ನೆ
ದಿಟವೈಸಲೆ ಚೆನ್ನೆ

ಒಲ್ಮೆಯು ನಲ್ಮೆಯು ಚೆಲುವೂ ಬೆಡಗೂ
ನಿನ್ನಲ್ಲಿವೆ; ಇದೆ ಎಲ್ಲಾ ಕೊಡಗೂ,
ಗಿರಿ ತಲೆಕಾವೇರಿಗಳಿನ್ನೇಕೆ ?
ನೀನಿರೆ ಅವು ಬೇಕೆ ?

೬

ಮಲೆಗಳ ಕತ್ತಲೆ ಕವಲೊಡೆದಂದದಿ
ಜಡೆ ತಂಗೊಳಿಸುತ್ತಿರಡಾಗಂದದಿ
ಕೇಳಿದೆನಾಕೆಯ "ಹೆಸರೇನಮ್ಮ,"
ನುಡಿದಳು "ಪೂವಮ್ಮ"

ನುಡಿಸುವ ಹುಚ್ಚಿಗೆ ಹೆಸರನು ಕೇಳಿದೆ;
ಅಲಿಸಿ ಪರಮಹ್ಲಾದವ ತಾಳಿದೆ
ದನಿಯೂ ಹೆಸರೂ ಎರಡೂ ಹೂವೆ,
ಅವಳಂತೂ ಹೂವೆ,

೭

ಕೊಡಗದು ಹಿರಿಮಲೆಗಳ ಸಿರಿನಾಡು;
ಮೇಲಾಕಾಶವು ಕೆಳಗಡೆ ಕಾಡು,
ಅಂತೆಯೇ ಇರುವುದು ನನ್ನಾ ಬೀಡು
ನಚ್ಚಿನ ಮಲೆ ನಾಡು.

ಮಲೆನಾಡೆನಗಿದೆ ಹತ್ತಿರದಲ್ಲೆ,
ಅದರಿಂ ಕೊಡಗನು ಮರೆಯಲು ಬಲ್ಲೆ.
ಅದರೆ ಮರೆಯೆನು ನಿನಗಾಗಮ್ಮ
ಮುದ್ದಿನ ಪೂವಮ್ಮ.

ಮುಕ್ಕಳ ಪುಸ್ತಕ.

ಬೀ ದಿ ಮೊ ತು !

(ಮೂತುಗಾರ ಮಲ್ಲನಿಂದ)

(ಈ ಸಂದರ್ಭದಲ್ಲಿ ವ್ಯಕ್ತಿ ದೂಷಣೆಗಾಗಲಿ ಪರಿಹಾಸ್ಯಕ್ಕಾಗಲೀ, ದೋಷರೋಪವಾದ ವ್ಯಕ್ತಿ ಸಂಬಂಧವಾದ ವಿಷಯಗಳಿಗಾಗಲೀ ಎಡೆ ಇಲ್ಲ. ಲೋಕ ರೂಢಿಯಾಗಿ ಜನರು ವಿಷಯಗಳನ್ನು ತಿಳಿದೂ ತಿಳಿಯದೆಯೂ ಮಾತಾಡುವುದು ಕೇವಲ ಸಾಮಾನ್ಯವು. ಆ ರೀತಿ ಸಾಧಾರಣವಾಗಿ ಪ್ರಕೃತ ವಿಷಯಗಳ ಮೇಲೆ ಜನರು ಬೀದಿಗಳಲ್ಲಿ ಆಡಿಕೊಳ್ಳುವುದನ್ನು ಮಾತ್ರ ವಿನೋದಕ್ಕಾಗಿ ಪ್ರತಿ ಬಿಂಬಿಸಲು ಅಸ್ಪದ ಕೊಡಬೇಕಾದೆ.) [ಸಂ. ಕೊ]

ಸ್ವಾವಿೂ! ಮೈಸೂರು, ಬೆಂಗಳೂರು ಸುತ್ತಿ, ನಿಮ್ಮೂರಿಗೆ ತಲ್ಪಿದ್ದೀನಿ. ನಿಮ್ಮ ಕೊಡಗ್ನಲ್ಲಿ ವಸಿ ಸ್ಥಳ ಕೊಡ್ರಿ ನನ್ಗೆ ಅಂತ ಕೇಳ್ಕೀವ್ನಿ. ನಿಮ್ಮೂರು ಒಲು ಚೆಂದ ನೋಡ್ರಿ! ಅಮಲ್ಗೇಶನ್ ಸುದ್ದಿ ಒಲೇ ಜೋರು—ಇದು ಕೇಳೀನೇ ಇಲ್ಲಂದೆ. ಮೈಸೂರುಕೊಡಗು ಅಮಲ್ಗೇಶನ್—ಇಷ್ಟೇ ಅಂತಿದ್ದೆ. ಇಲ್ಲಿ ನೋಡಿದ್ರೆ! ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್—ಕಮಿಶನರ್ ಹುದ್ದೆ. ಅಮಲ್ಗೇಶನ್—ಫೆಡರೇಶನ್ ಸೆಂಟ್ರಲ್ ಬ್ಯಾಂಕು ಅಮಲ್ಗೇಶನ್—ಇದೆಲ್ಲಾ ಭಲೇ ಜೋರಾಗಿದೆ. ಇದೇನು ಸ್ವಾವಿೂ ನಿಮ್ಮೂರು ಮಡಿಕೇರಿಲಿ ಈ ಸೋಜಿಗ!!

X X X X

ಅಲ್ನೋಡಿದ್ರೆ—ಮುನ್ಸಿಪಲ್ ಇಲೆಕ್ಷನ್! ಹಳಬರು—ಹೊಸಬರು ಅಮಲ್ಗೇಶನ್—ಎಲ್ಲರೂ ವಿುಳಿತ—ಜಾಗ ಸಿಕ್ಕೋ ವರೆಗೆ, ಒಬ್ಬನೊಬ್ಬ ದೂರ ಹೋರಾಟ; ಮತ್ತೆ ಎಲ್ರೂ ಒಂದು—ನೀರು ನಮ್ಮ ಮನೆ ಅಂಗಳಕ್ಕೆ ಕೊಡ್ರಿ ಬುದ್ಧಿ ಅಂತ ಕೇಳಿದ್ರೆ—No water—ನೀರಿಲ್ಲ—ಕೊಡಲಿಕ್ಕಾಗೋದಿಲ್ಲ. ಅನ್ಯಾರಿ ನೋಡ್ರಿ—ಓಟು ಕೊಡಿ, ಈಟು ಕೊಡಿ, ಎಲ್ಲಾ ಓಟು ನನ್ಗೇ ಕೊಡಿ ಅಂತ ಈಗ ಕೂಗೋದು ಓಟು—ಆಟು ಎಲ್ಲಾ ಸಿಕ್ಕಿ ಜಾಗ ಭದ್ರವಾದ್ಮೇಲೆ—ಏನಾದರೂ ಕೇಳ್ಬೇಕು ಅಂತ ಹೋದ್ರೆ ನೋಡ್ರಿ—ಆಗ ಒಂದು ಕವೂಲು ಬೇರೆ ಹ್ಯಾಗೂ ನಿಮ್ಮ ಪೌರ ಸಭೆ ಇಲೆಕ್ಷನ್ನಾ ಮುಗಿಯಿತು ನೋಡ್ರಿ, ಇನ್ನು ಸ್ವಲ್ಪ ದಿವ್ಸ ನಿಮ್ನ ಮಾತಾಡ್ಸೋ ಹುಗಿಲ್ಲ. ನೀವೇ, ಅವರ್ನ ಮಾತಾಡ್ಸೇಕಾದ್ರೆ!

X X X X

ನಿಮ್ಮೂರಲ್ಲಿ ಸ್ವಾವಿ—ಸೊಗಸುಗಾರ ಪುಟ್ಟಸಾಮಿ ಅಯ್ಯಿಗಳು ಬಹಳ ಅವ್ರೆ—ಜೊತೆಗೆ ಮದುವೆ ಸಂತೆ ಒಳ್ಗೊಳ್ಗೆ ಅಂತ ಕೇಳ್ದೆ—ಒಂದು ಜಾಗದಲ್ಲಿ ಒಂದು ವ.ನೇಲಿ—ನಾನೂ ನನ್ನ ಸ್ನೇಹಿತ ಜೋಳುಗಾರ ಹೋಗಿದ್ದೆವು ನೋಡ್ರಿ. ಅಲ್ಲೇ ನೋ ಹೆಣ್ಣನ್ನೋಡೋಕೆ ಬರ್ತಾರೆ ಅಂತ ಸುದ್ದಿ ಇತ್ತು—ನಾವು ಕುಂತು ಸ್ವಲ್ಪೋತ್ತಿಗೇನೇ—ಜರ್ರ್ ಅಂತ ವೋಟರ್ ಗಾಡೀಲಿ ಯಾರೋ ಒಬ್ರು ಸೊಗಸುಗಾರ್ರು—ಇನ್ನು ಇಬ್ರು ಬಾದ್ರು—ನಾನು ಹೊಸ್ಬ ಮನೇಲಿ ಒಂದು ಬದೀಗಾವೆ—ಒಳ್ಗೋದ್ರು ನೋಡ್ರಿ—ಅಲ್ಲಿ ಹೆಣ್ಣು ನೋಡೋಕೆ. ಎಲ್ಲಾ ಉಪಚಾರ ಆಯ್ತು. ಆ ಮದುವೆ ಗಂಡು ಆಗೋನು—ಸುಮ್ಗೆ ಬಾಯಿಬಿಚ್ಚದೆ ಕುಳ್ತಿದ್ದ—ಏನೋ ಗೌರವ ಅಂತಿದ್ದೆ—ಹೆಂಣು ನೋಡಿ ಎಲ್ಲಾ ಹೊರ್ಗೆ ಬಂದ್ರು—ಕೊನೆಗೆ ಅಳಿಯ ಹೊರ್ಗೆ ಬಂದು—ಅಗ್ನಿ—ನ—ನ—ನ—ನಮಸ್ಕಾರ—ಹೋ—ಹೋ—ಗಿ ಬರ್ಮನಿ ಅಂತ ಕೈ ಮುಗಿದ ನೋಡ್ರಿ. ಗೊತಾಯ್ತು ಹೆಣ್ಣಿನ ಮನೆಯವರಿಗೆ—ಅಳಿಯ ಬಿಕ್ಲ ಅಂತ—ಅಂತೂ ಹೆಂಣು ನೋಡ್ಲಿಕ್ಕೆ ಹೋಗೋ ಜರ್ಬು!!

X X X X

ನಮ್ಮೂರಾಗೆ ಖಾದಿ ಹಾಕೋರು ಹೆಚ್ಚು ಅನ್ಯಾರ—ಈ ಊರಾಗೆ ಭಲೆ ಕಡಿಮೆ ಅನ್ಯಾರ—ಅದೇನೋ ಕಾರಣ—ಹಿಂಗೆ ಹೇಳ್ದೆ,—ನಮ್ಮ ಸರ್ಕಾರಕ್ಕೆ ಸಿಟ್ಟು ಬರೋಕಿಲ್ಲ ಅಂತ ಧೈರ್ಯ—ಸರ್ಕಾರದ ಸಿಟ್ಟು ನಮ್ಗೆ ಬೇಡ ಬುದ್ಧಿ—ನಾನು ಬಡ್ಡ ಮಾತುಗಾರ—ನನ್ನ ಜೇವ್ನ ಹೆಂಗೂ ಕಳಿತೈತೆ—ಸರ್ಕಾರ ದೊಡನೆ ಸಿಟ್ಟು ಕಟ್ಟುಕೊಂಡು ನನ್ಗೇಕೆ—ಆದ್ರೆ ನೋಡ್ರಿ ಬುದ್ಧಿ—ಖಾದಿ ಹಾಕಿದವ್ರ ಭಕ್ತರ ಮೆದೆ ಎಲ್ಲಾ ಬೂದಿ ಅಂತ ಸುದ್ದಿ—ಇದೇನ್ರಿ ನಿಮ್ಮೂರಾಗೆ ಇದೊಂದು ಸೋಜಿಗ!! ಈ ಬೆಂಕಿ ಹೆಟ್ಟೋರ್ನ ಹೇಳೋದು—ಕೇಳೋದು ಯೂರೂ ಇಲ್ವಾ!!

X X X X

ಇಲ್ಲೂ ಸತ್ಯಾಗ್ರಹ ಆಯ್ತು ಬುದ್ಧಿ ಅಯ್ಯೋ! ನಾನೇನೋ ನಮ್ಮೂರ ಸತಿಯರೇ ಗಂಡು ಭೇರಿಗಳು ಅಂತಿದ್ದೆ! ಇಲ್ಲೂ ಸತಿ+ಆಗ್ರಹ ಆಯ್ತು—ಅಯ್ಯೋ—ನಮ್ಮ ಬಾಳು ಕೆಡ್ತು—ಹಾಂಗಾರೆ ಹರಿಜನರು ಸತ್ಯಾಗ್ರಹಕ್ಕೆ ತಗಲಿ ಹೊರಟೋದ್ರು ಅಂತ, ಕೆಲವರಿಗೆ ಬಲು ಕೋಪ ಅನ್ಯಾರಿ—ಅದ್ಯಾಕ್ರಿ—ಅವರಸತಿಯ+ರಆಗ್ರಹ ಅವರ ಮೇಲೆ ಬೇಕಿಯವರಿಗೆ ಯಾಕ್ರಿ ಸಿಟ್ಟು—ಹೋಗೋರು ಹೋದ್ರೆ—ಇರೋರು ಇರ್ತಾರೆ—ಓಹೋ ಗೊತ್ತಾಯ್ತು—ಜೇತಗಾರರು ಜೈಲಿಗೆ ಹೊಂಟೋಗ್ತಿದ್ದಾರೆ. ಇಷ್ಟೇನಾ ಸಿಟ್ಟು—ನಮ್ಮಪ್ಪಾ ಸಿಟ್ಟು ಮಾಡ ಬೇಡ್ರಿ,—ಅವ್ರೆಲ್ಲಾ ಹಿಂದ್ಗೇ ಬರ್ತಾರೆ ಕಾಣ್ರಿ,—ಹೋದೋರು ಬರೋಕಿಲ್ವಾ—ಇದೇನ್ರಿ ಹೇಳ್ತೀರಿ—ಸುಮ್ಗೆ ಸಿಟ್ಟು ಪೂಡಬೇಡ್ರಿ! ತಡ್ಕೊಳ್ಳಿ ಸ್ವಲ್ಪ ಸಿಟ್ಟಾ!!

X X X X

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಟೆರಿಟೋರಿಯಲ್ ಪಟಲಾಮಿನ ಆಫೀಸರುಗಳ ತರಬೇತು ಈ ತಾ. 9 ರಿಂದ ಮಡಿಕೇರಿಯಲ್ಲಿ ಪ್ರಾರಂಭವಾಗಿದೆ.

ಕೊಡಗಿನ ಸಾರಾಯಿ ಅಂಗಡಿಗಳ ಹರಾಜು ಈ ತಾ. 24 ನೇ ಶುಕ್ರವಾರ ದಿನ ಮಡಿಕೇರಿಯಲ್ಲು ನಡೆಯುವವಾಗಿ ವರ್ತಮಾನ.

ಭಾಗಮಂಡ್ಲ ಪಂಚಾಯತಿಗೆ ಗತಿಸಿದ ಮೆ. ಬೆನ್ನೂರು ಈಶ್ವರಭಟ್ಟರ ಬದಲಿಗೆ ಮೆ. ಕೆ ಶಿವರಾಮ ಭಟ್ಟರು ಜುನಾಯಿತರಾಗಿದ್ದಾರೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಹಾಕಿ ಮತ್ತು ಕ್ರಿಕೆಟ್ ಟೀಮುಗಳು ಈ ಶನಿವಾರ ಮಂಗಳೂರಿಗೆ ಹೋಗುವರಂತೆ. ಇವರಿಗೆ ಜಯವಾಗಲೆಂದೇ ನಮ್ಮ ಅಪೇಕ್ಷೆ.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ರಾವ್‌ಬಹದ್ದೂರ್ ಕೇಟೋಳಿರ ಚಂಗಪ್ಪನವರ ಅಧಿಕಾರದ ಅವಧಿಯನ್ನು ಬರುವ ಮಾರ್ಚಿ ತಿಂಗಳಿಂದ ಇನ್ನೂ ಒಂದು ವರ್ಷದ ವರೆಗೆ ಚೀಫ್ ಕಮಿಷನರವರು ಮುಂದರಿಸಿರುವರು.

ದಕ್ಷಿಣ ಕೊಡಗಿನ ಟೋಲುಗೇಟುಗಳು ವೀರಾಜಪೇಟೆ ತಾಲೂಕು ಖಜೇರಿ ಮುಂದೆ ತಾ. 15—2—33 ರಲ್ಲೂ, ಉತ್ತರ ಕೊಡಗಿನ ಟೋಲ್‌ಗೇಟ್‌ಗಳು ಮಡಿಕೇರಿ ತಾಲೋಕು ಆಫೀಸು ಮುಂದೆ ತಾ. 17—2—33 ರಲ್ಲೂ ಅಸಿಸ್ಟೆಂಟ್ ಕಮಿಷನರವರಿಂದ ಹರಾಜುಮಾಡಲ್ಪಡುತ್ತವೆ.

ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರಾದ ಮೆ. ಮಲ್ಲೇಂಗಡ ಮುತ್ತಣ್ಣನವರು ತಮ್ಮ ಪ್ರೇಕ್ಟಿಕಲ್ ಟ್ರೇನಿಂಗನ್ನು ಮುಗಿಸಿ ತಮ್ಮ ಚಾರ್ಜನ್ನು ತಾ. 1—2—33 ರಿಂದ ವಹಿಸಿಕೊಂಡಿರುವರು. ಮೊದಲಿನ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರಾದ ಮೆ. ಕೋಡಿಮಣಿಯಂಡ ಬೆಳ್ಯಪ್ಪನವರು 2 ತಿಂಗಳು ರಜದಲ್ಲಿರುವರೆಂದು ತಿಳಿಯುತ್ತೇವೆ.

ಅಮ್ಮತ್ತಿನಾಡು, ಕಾರ್ಮಾಡು ನಲ್ವತೊಕ್ಲು ಬಳಗುಂದ ಗ್ರಾಮಗಳಲ್ಲಿ ದನಕರುಗಳಿಗೆ ದೊಡ್ಡರೋಗ ಸುರುವಾಗಿ ಅನೇಕ ದನಕರುಗಳು ಇದಕ್ಕೆ ತುತ್ತಾಗಿವೆ. ಬಳಗುಂದ ಗ್ರಾಮದಲ್ಲಿ ದನಗಳಿಗೆ ಕಾಲು ಮತ್ತು ಬಾಯಿ ಜ್ವರ ಇದೆಯಂತೆ. ಮಡಿಕೇರಿ ಟೌನಿನಲ್ಲೂ ಇತ್ತೀಚೆಗೆ ಜಾನುವಾರುಗಳ ದೊಡ್ಡ ರೋಗವು ತಲೆದೋರಿದೆ.

ನಾಪೋಕ್ಲು ಬೆಂಚ್ ಕೋರ್ಟಿನ ಪ್ರೇಜಿಸ್ಟ್ರೇಟರಾಗಿದ್ದ ಮೆ. ಮೂದಂಡ ಮಂದಂಣನವರು ವೈಕಲ್ಪಾದ್ದಕ್ಕೆ ಆರು ಬದಲಿಗೆ ಕುಂಜಲ ಗ್ರಾಮದ ಮೆ. ಪೇನತ ಮುಟ್ಟಲ್ ನುಪ್ಪಟ್ಟಿಯವರನ್ನು ಬೆಂಚ್ ಮೇಜಿಸ್ಟ್ರೇಟರಾಗಿಯೂ, ಮೆ. ಊದಿಯಂಡ ಮಾಚ್ಚಯ್ಯನವರು ಬೆಂಚ್ ಕೋರ್ಟಿನ ಪ್ರಿಸಿಡಿಂಗ್ ಆಫೀಸರ್‌ರನ್ನಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಕೊಳತಡ ಬೈಗೋಡು ಗ್ರಾಮದ ಮುಕ್ಕಾಟಿರ ಸೋಮಯ್ಯನವರ 350 ಭತ್ತದ ಮೆದೆಯು ಬೆಂದು ಹೋಗಿ ಸುಮಾರು 15 ಗಾಡಿ ಭತ್ತವು ನಷ್ಟವಾಗಿದೆಯೆಂದು ವರ್ತಮಾನ. ಇನ್ನೂ ಕೆಲವರ ಮೆದೆಗಳೂ ಈ ಕಷ್ಟಕಾಲದಲ್ಲಿ ಬೆಂದು ಹೋಗಿವೆ. ಡಿಸ್ಟ್ರಿಕ್ಟ್ ಕಛೇರಿಯಿಂದ ಏನಾದರೂ ಸಹಾಯ ದೊರಕಬಹುದೆಂದು ಈ ಬಡವರು ನಿರೀಕ್ಷಣೆಯಿದೆ.

ದೇಶದ ಜನರಿಗೆ ಒದಗಿರುವ ಈ ಬಿಕ್ಕಟ್ಟಿನಲ್ಲಿ ರೈತರ ಸ್ಥಿತಿಗತಿಗಳನ್ನು ಒಡನೆ ಸರಕಾರದ ಮುಂದಿಡಲೂ, ಕಂದಾಯದ ಕಂತುಗಳನ್ನು ಹೆಚ್ಚಿಸಲೂ ಮತ್ತು ಕಂದಾಯವನ್ನು ಕಮ್ಮಿಮಾಡಲೂ ಸಲಹೆ ಕೊಡುವಂತೆ ಜವಿನ್ವಾರ್ ಸಂಘದವರು ಒಂದು ವಿಶೇಷ ವಿಂಟಿಂಗನ್ನಾಗಲೀ ಯಾ ಒಂದು ಕಮಿಟಿ ವಿಂಟಿಂಗನ್ನಾಗಲೀ ವೀರಾಜಪೇಟೆಯಲ್ಲಿ ನಡಿಸಬೇಕೆಂತ ಒಂದು ಬಾತ್ಮಿ.

ಕೊಡಗಿನಲ್ಲಿ ಜನನ ಮತ್ತು ಮರಣವನ್ನು ಸರಿಯಾಗಿ ದಾಕಲು ಮಾಡಲು ಮಂಜೂರು ಮಾಡಿದ ಖಾಸೂನು ದಕ್ಷಿಣ ಕೊಡಗಿನಲ್ಲಿ ನಾಡು ಕಚೇರಿಯಿಂದ 5 ಮೈಲು ಸುತ್ತಳತೆಯೊಳಗಿರುವ 63 ಗ್ರಾಮಗಳಲ್ಲಿಯೂ, ಅದೇ ರೀತಿ ಉತ್ತರ ಕೊಡಗಿನಲ್ಲಿ 105 ಗ್ರಾಮಗಳಲ್ಲಿಯೂ ಜಾರಿಗೆ ಬರುತ್ತದೆಂದೂ ಮತ್ತು ಇದಕ್ಕೆ ಸಮ್ಮಂದಪಟ್ಟ ರೂಲ್ಸುಗಳು ಎಲ್ಲರ ತಿಳುವಳಿಕೆಗೋಸ್ಕರ ಕೊಡಗು ಗಜೆಟಿನಲ್ಲಿ ಪ್ರಕಟಿಸಲಾಗಿದೆ.

ಕಂದಾಯದ ಕಂತುಗಳನ್ನು ವಿಸಿಸುವದಕ್ಕೂ, ಕಂದಾಯವನ್ನು ಕಮ್ಮಿಮಾಡುವದಕ್ಕೂ ಸರಕಾರದವರನ್ನು ಕೇಳಿಕೊಳ್ಳುವ ಬಗ್ಗೆ ಅಮ್ಮತ್ತಿ ನಾಡಿನವರು ಒಂದು ವಿಂಟಿಂಗನ್ನು ಅಮ್ಮತ್ತಿ ಪೇಟೆಯಲ್ಲಿ ಫೆಬ್ರವರಿ ತಾ. 14ನೇ ಮಂಗಳವಾರ 2 ಗಂಟೆಗೆ ನಡೆಸುವ ಏರ್ಪಾಡು ಮಾಡಲಾಗಿದೆಯಂತೆ. ಅಂತೆಯೇ ದೇಶದ ಎಲ್ಲಾ ಕಡೆಗಳಲ್ಲಿ ಆ ಬಗ್ಗೆ ವಿಂಟಿಂಗುಗಳನ್ನು ಒಡನೆ ನಡಿಸಿ ತೀರ್ಮಾನಗಳನ್ನು ಕಳುಹಿಸಬೇಕಾಗಿ ಒಬ್ಬರಿ ಬಾತ್ಮಿ.

ಹತ್ತನೇಕಲ್ಲು ಜೇರಳ ಶ್ರೀಮಂಗಲ ಸ್ಕೂಲಿನ ವಾರ್ಷಿಕೋತ್ಸವವು ಕಳೆದ ಆದಿತ್ಯವಾರ ನಡೆಯಿತು. ಅಟೋಟಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಇನಾಮುಗಳು ಕೊಡಲ್ಪಟ್ಟವು. ಒಂದು ಮೈಲು ಓಟದಲ್ಲಿ ಕೊಂಗಟ್ಟಿರ ಕೆ. ಉತ್ತಪ್ಪನವರು ವೈದಲನೆಯದಾಗಿ ಬಂದು ಕೊಂಗಟ್ಟಿರ ಎ. ಸುಬ್ಬಯ್ಯ ಬಿ. ಎ., ಬಿ. ಎಲ್. ರವರ ಮೆಮೋರಿಯಲ್ ಕಪ್ಪನ್ನು ಪಡೆದರು. ಸಾಯಂಕಾಲ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಪ್ರಹಸನಗಳು ಅಭಿನಯಿಸಲ್ಪಟ್ಟವು. ಮೆ ಪಾಲೇಕಂಡ ಮೇದಪ್ಪ ಬಿ. ಎ. ಬಿ ಎಲ್. ಸಬ್‌ಜಡ್ಜರು ಅಧ್ಯಕ್ಷರಾಗಿದ್ದರು.

ಕಳೆದ ಮಡಿಕೇರಿ ಮುನ್ಸಿಪಲ್ ಮೆಂಬರುಗಳ ಜುನಾಯಿತಿಯಲ್ಲಿ ಕೊಡವರ ಮೂರು ಸೀಟುಗಳಿಗೆ ಮೆ. ಗಳಾದ ಕೊಡುದೆರ ಮೊದಪ್ಪನವರು, ಐಚೆಟ್ಟಿರ ಸುಬ್ಬಯ್ಯನವರು ಮತ್ತು ಮೇರಿಯಂಡ ಮೊದಪ್ಪನವರೂ, ಕ್ರಿಶ್ಚಿಯನರ ಒಂದು ಸೀಟಿಗೆ ಡಾಕ್ಟರ್ ವಾರುಣಿಯವರೂ, ಮುಸಲ್ಮಾನರ 2 ಸೀಟುಗಳಿಗೆ ಮೆ. ಗಳಾದ ಅಬ್ದುಲ್ ರಹಮಾನ್ ಖಾನರು ಮತ್ತು ಮುಹಮ್ಮದ್ ಗೌಸ್‌ರವರೂ, ಹಿಂದುಗಳು ಮತ್ತು ಇತರರ ಸೀಟಿಗೆ ಮೆ. ಗಳಾದ ಕೆ. ಕೃಷ್ಣಮೂರ್ತಿಯವರ, ವೆಂಕಟ ಸುಬ್ಬಯ್ಯನವರು, ಎನ್ ಬಿ ನೋಮಣ್ಣನವರು, ಕೆ. ಮಲ್ಲಪ್ಪನವರು, ಆರ್. ಎಂ. ಕಾವನಯ್ಯನವರು ಮತ್ತು ವೈಶ್ಯರ ನಾಂಜಪ್ಪ ಶೆಟ್ಟಿ ಮೆಂಬರುಗಳಾಗಿ ಆರಿಸಲ್ಪಟ್ಟಿರುವರು. ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟರ ಜುನಾಯಿತಿಯು ಈ ತಾ. 20ನೇ ಸೋಮವಾರ ನಡೆಯುವುದು. ಕ್ರಿಶ್ಚಿಯನರ ಪರವಾಗಿ ಒಬ್ಬರೇ ಉಮೇದ್ವಾರರಿದ್ದರು. ಮಹಮದೀಯರಲ್ಲೂ, ಹಿಂದುಗಳಲ್ಲೂ ಅವಶ್ಯಕ್ಕಿಂತ ಹೆಚ್ಚಿಗೆ ಇದ್ದ ಮೆಂಬರುಗಳು ತಮ್ಮ ಉಮೇದ್ವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರು.

ತಿದ್ದುಪಡಿ.

ಕೊಡಗು ಪತ್ರಿಕೆಯ ತಾ. 3—2—33 ರ ಸಂಚಿಕೆಯ ವರ್ತಮಾನ ಸಂಗ್ರಹದಲ್ಲು "ಕೊರವಂಡ ಯಂ. ತಿಮ್ಮಯ್ಯನವರು ಈ ವೊದಲು ಆಲ್ ಇಂಡಿಯೂ ಇಂಟಿವಿಜುವಲ್ ಚೆಂಪಿಯನ್ ಶಿಪ್ ಕಪ್ಪನ್ನು ಪಡೆದುದಲ್ಲದೆ" ಎಂಶ ಇರುವದನ್ನು "ಕೊರವಂಡ ಯಂ. ತಿಮ್ಮಯ್ಯನವರು ಈ ವೊದಲು ಬೊಂಬಾಯಿಯ ಆಲ್‌ಸ್ಕೂಲ್ಸ್ ಇಂಡಿವಿಜುವಲ್ ಚೆಂಪಿಯನ್ ಶಿಪ್ ಕಪ್ಪನ್ನು ಪಡೆದುದಲ್ಲದೆ" ಎಂದು ಓದಿಕೊಳ್ಳಬೇಕಾಗಿ ಮಹನೀಯರಲ್ಲಿ ಕೋರಲಾಗಿದೆ. (ಕೊ. ಸಂ.)

ಹಿಂದೂದೇಶ.

ಈ ವರ್ಷದ ಕಾಂಗ್ರೆಸ್ ಅಧಿವೇಶನವು ಬೆನಾರಿಸಿನಲ್ಲಿ ನಡಿಸುವುದಾಗಿ ನಿರ್ಧಾರವಾಗಿದೆ.

ವೈಸರಾಯರು ರಂಗಯ್ಯನವರ ದೇವಾಲಯ ಪ್ರವೇಶದ ಮಸೂದೆಗೆ ಮಂಜೂರಾತಿಕೊಟ್ಟಿರುವರು.

ಶಾಂತಿ, ಸಮಾಧಾನ, ಭದ್ರತೆಗಳಿಲ್ಲದ ಒಂಗಾಳಕ್ಕೆ ಪ್ರಾಂತೀಕ ಸ್ವಾತಂತ್ರ್ಯ ಬೇಡವೆಂತ ಕಲ್ಕತ್ತಾ ಯುರೋಪಿಯನರ ಸಂಘದ ಅಧ್ಯಕ್ಷರು ಭಾಷಣಮಾಡಿತೆ.

ಯಶವಾಲನೆಂಬ ಕ್ರಾಂತಿಕಾರ್ತನಿಗೆ ಆಶ್ರಯಕೊಟ್ಟ ಅಲಹಾಬಾದಿನ ಶ್ರೀಮತಿ ಸಾವಿತ್ರಿ ದೇವಿಯವರಿಗೆ 5 ವರ್ಷಗಳ ಸಜೆಯಾದುದನ್ನು ಹೈಕೋರ್ಟಿನಲ್ಲಿ ಕಾಯಂ ಮಾಡಲಾಯಿತು.

ಗಾಂಧಿಯವರು ಜೈಲಲ್ಲಿ ಪತ್ರವು ವ್ಯವಹಾರ ಮೂಲಕ ಉರ್ದು ಬಾಷೆ ಕಲಿಯುತ್ತಿರುವರು. ಬೇಗಮ್ ಅಲಮ್, ಜೋಹ್ರ ಅನ್ಸಾರಿ, ರೈಹಂಸ ತಯೆಬ್ಜಿಯವರೇ ವೊದಲಾದ ಮುಸಲ್ಮಾನ ಸ್ತ್ರೀಯರೇ ಅವರ ಶಿಕ್ಷಕರು.

ಅಂಗಹೀನರಾಗುವ ಯಾ ಅಕಾಲ ಮರಣಕ್ಕೆ ತುತ್ತಾಗುವ ಕೆಲಸಗಾರರ ಕುಟುಂಬದವರು ನಿರ್ಗತಿಕರಾಗದಂತೆ ವ್ಯವಸ್ಥೆಗಳಾಗಲು ಶಾಸನವೊಂದು ರಚನೆಯಾಗಲಿದ್ದು, ತತ್ಸಂಬಂಧವಾಗಿ ಆಲೋಚಿಸಿ ನಿರ್ದರಿಸಲು ಸಲೆಕ್ಟ್ ಕಮಿಟಿಯು ರಚನೆಯಾಗಿದೆ.

ಈಗ ಹೊಲಿಯುವ ಯಂತ್ರಗಳಿಗಾಗಿ ಇಂಡಿಯಾದಿಂದ 85 ಲಕ್ಷ ರೂ. ಹೊರ ಹೋಗುತ್ತಿದೆ. ಈಗ ಕಲ್ಕತ್ತದ ವೋಯಿರ್ ಎಂಡ್ ಕಂಪೆನಿ ಎಂಬ ಶುದ್ಧ ದೇಶೀಯ ಕಂಪೆನಿಯವರು ವಿದೇಶಿ ಯಂತ್ರದಷ್ಟೇ ಉತ್ತಮವಾಗಿರುವ ಸ್ವದೇಶಿ ಯಂತ್ರವನ್ನು ತಯಾರಿಸಿರುವರು.

ಬೊಸಾದ್ ತಾಲೂಕಿನ ರಾಸ್ ಗ್ರಾಮದಲ್ಲಿ 'ಸರ್ವಾದಿಕಾರಿಗಳ ಪರಿಷತ್ತನ್ನು ಜರುಗಿಸಲು ಸಾಹಸಗೊಂಡು ನೂರು ಜನ ಮಹಿಳೆಯರ ಮೆರವಣಿಗೆಯಲ್ಲಿ ಮುಂದಾಳಾಗಿ ಹೊರಟ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರನ್ನು ಇತರ ಆರು ಮಹಿಳೆಯರೊಂದಿಗೆ ದಸ್ತಗಿರಿಮಾಡಿ, ಏಜಾನಿಗೆಗಾಗಿ ಬೊಸಾದಿಗೆ ಒಯ್ದಿರುವರು. ಇವರಿಗೆ 1 ವರ್ಷ ಸಜೆಯೂ 500 ರೂಪಾಯಿ ದಂಡವೂ ತಪ್ಪಿದರೆ ಹೆಚ್ಚಿನ 6 ತಿಂಗಳ ಸಜೆಯೂ ವಿಧಿಸಲಾಗಿದೆ.

"1933ರಲ್ಲಿ ಮಹಾತ್ಮರ ಮತ್ತು ಇತರ ರಾಜಕೀಯ ನಿರ್ಬಂಧಿತರ ಬಿಡುಗಡೆಯಾಗುವುದೆಂದು ನಿರೀಕ್ಷಿಸುತ್ತೇನೆ. ನೂತನ ರಾಜ್ಯಾಂಗ ನಿರ್ಮಾಣದಲ್ಲಿ ಮಹಾತ್ಮರು ವೈಸ್ರಾಯರಿಗೆ ಸಹಕಾರಿಸುವರೆಂದು ಆಶಿಸುತ್ತೇನೆ. ಭಾರತ ಕಾಂಗ್ರೆಸ್ ಸಭೆಯವರ ಸಮ್ಮತಿಯಿಲ್ಲದೆ ಯಾವ ಪರಿವರ್ತನೆಯೂ ಜಾರಿಗೆ ಬರುವುದಿಲ್ಲ. ಹೊಸ ವರ್ಷದಲ್ಲಿ ಶಾಂತಿಯುಂಟಾಗುವುದೆಂದೂ ಕಠಿಣ ಶಾಸನ ಪ್ರಯೋಗಗಳೂ, ಆರ್ಡಿನಾನ್ಸುಗಳೂ ಏಂವಿಸಲ್ಪಡುವುದೆಂದೂ, ಹತ್ಯೆಯೂ ದೌರ್ಜನ್ಯವೂ ಮಾಯವಾಗುವುದೆಂದೂ ಆಶಿಸುತ್ತೇನೆ' ಎಂದು ಜಾರ್ಜ್ ಲಾನ್ಸ್‌ಬರಿಯವರು ಬ್ರಿಟಿಷ್ ಲೇಬರು ಪಕ್ಷದವರ ಪರವಾಗಿ ಭಾರತ ದೇಶಕ್ಕೆ ಸಂದೇಶವನ್ನು ಕಳುಹಿಸಿಕೊಟ್ಟಿರುತ್ತಾರೆ.

ಬಂಗಾಳದ ಚಿನ್ಸುರಾ ಪುಟ್ಟಣದ ಬಳಿ ಬಡವೆಲ್‌ಗುಂಜ್ ಪೊಲೀಸ್ ಸ್ಟೇಶನಿನ ಕಂಪೌಂಡಿನಲ್ಲಿ ರಾಷ್ಟ್ರೀಯ ಧ್ವಜವನ್ನೇರಿಸಬೇಕೆಂದು ಸುಮಾರು 700 ಮಂದಿ ಸೇರಿ ಪ್ರಯತ್ನಿಸಲೆತ್ನಿಸಿದಾಗ ಪೊಲೀಸರು ಬಾರಿ ಬಾರಿ ಲಾಠಿಪ್ರಹಾರ ಮಾಡಿದರೂ ಜನರು ಜಗ್ಗಲಿಲ್ಲ. ಆಗ ಪೊಲೀಸರು ಗುಂಡುಹಾರಿಸಿ 6 ಮಂದಿ ಗಾಯಗೊಂಡಿಗುವರು. ಇನ್ನಾರು ಮಂದಿಗೆ ಲಾಠಿ ಪ್ರಹಾರದಿಂದ ಜಖಂ ಆಗಿರುವುದು. ಸ್ವತಂತ್ರ ದಿನಾಚರಣೆಯ ನಿಮಿತ್ತ ಗಯೂಪಟ್ಟಣದಲ್ಲಿ 100, ದರ್ಭಾಂಗದಲ್ಲಿ 39, ಸಮಸ್ತಿಪುರದಲ್ಲಿ 30 ಮಂದಿಯ ದಸ್ತಗಿರಿಯಾಗಿರುವುದು. ಇದೇ ತಾ. 28 ನೇ ಸೋಮವಾರ ಮದ್ರಾಸಿನಲ್ಲಿ ಅಲ್ಲಲ್ಲಿ ಪಿಕೆಟ್ ಮಾಡುತ್ತಿದ್ದ 54 ಮಂದಿ ಕಾಂಗ್ರೆಸ್ ಸ್ವಯಂಸೇವಕರು ಕೈದುಮಾಡಲ್ಪಟ್ಟಿರುವರು. ತಾ 29ನೇ ಬೆಳಿಗ್ಗೆ ರಾಷ್ಟ್ರಧ್ವಜ ವಂದನೆಗಾಗಿ ಮೆರವಣಿಗೆಯಿಂದ ಹೋಗುತ್ತಿದ್ದ 9 ಮಂದಿಯ ದಸ್ತಗಿರಿಯಾಗಿದೆ. ತಾ 28ರಲ್ಲು ಕಲ್ಕತ್ತದ ಕೊಲೆಜ್ ಸ್ಕ್ವೇರಿನಲ್ಲಿ ಮೆರವಣಿಗೆ ಹೋಗುತ್ತಿದ್ದ 46 ಮಂದಿ ಸ್ತ್ರೀಯರು ಕೈದುಮಾಡಲ್ಪಟ್ಟಿರುವರು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಶೇಟ್ ಗೋವಿಂದದಾಸರ ದಸ್ತಗಿರಿಯ ನಿಮಿತ್ತ ಜಬಲ್‌ಪುರ ಪಟ್ಟಣವು ಎರಡು ದಿನ ಹರತಾಳವಾಚರಿಸಿರುವುದು

ಜನವರಿ ತಾ. 26ರಲ್ಲು ಮದ್ರಾಸು ಕೌನ್ಸಿಲಿನಲ್ಲಿ ಕೆಲವೊಂದು ವಿಷಯಗಳ ಕುರಿತು ಚರ್ಚೆ ನಡೆದು ಫಲಾಹಾರಕ್ಕೆಂದು ಮೆಂಬರರು ಏಳಲಿದ್ದಾಗ ಪ್ರೇಕ್ಷಕರಿದ್ದಲ್ಲಿಂದ 'ಇಂಕ್ವಿಲಾಬ್ ಜಿಂದಾಬಾದ್' ಎಂಬ ಘೋಷವೆದ್ದಿತು. ಕೌನ್ಸಿಲ್ ಮೆಂಬರು ಆಶ್ಚರ್ಯ ಚಕಿತರಾಗಿ ಇದೇನೆಂದು ಜಯಕಾರ ಬಂದ ಕಡೆ ನೋಡುವಷ್ಟರಲ್ಲಿ ಪಟಾಕಿಯು ಮೂಲೆಯೊಂದು ಸಿಡಿಯುತ್ತ ಕೆಳಗೆ ಬಿತ್ತು. ಆಗ ಸೆಕ್ರೆಟರಿಗಳಾಗಿದ್ದ ಮೆ. ಕೊನ್ನಾನ್ ಸ್ಮಿತ್‌ರು ಓಡಿಹೋಗಿ ಅದನ್ನು ನೊಂದಿಸಿದರು, ಕೂಡಲೆ ಮತ್ತೊಂದು ಸೂಲೆ ಬೀಳಲು ಅದನ್ನು ಕೌನ್ಸಿಲ್ ಸೆಕ್ರೆಟರಿಗಳಾದ ಶ್ರೀ ಸುಂದರರಾವ್ ನಾಯ್ಡುಗಳು ನೊಂದಿಸಿದರು. ಅಷ್ಟರಲ್ಲಿ ಯೂನಿಯನ್ ಜೇಕಿನಂತಿದ್ದ ಧ್ವಜವೊಂದು ಉರಿಯುತ್ತಾ ಸ್ತ್ರೀಯರು ಕೂತುಕೊಳ್ಳುವ ಸ್ಥಳಕ್ಕೆ ಬಿತ್ತು. ಕೌನ್ಸಿಲ್ ಸಭಾಸದನವು ಹೊಗೆ, ಪಟಾಕಿ ಸದ್ದು ಮತ್ತು ಸನೆಯಿಂದ ತುಂಬಿತು. ಕೆಲ ಮೆಂಬರು ಎದ್ದು ಹೊರಟು ಹೋಗಿಬಿಟ್ಟರು. ನಂತರ ನೀರು ಹೊಯ್ದು ಬೆಂಕಿಯನ್ನು ನೊಂದಿಸಲಾಯಿತು. ಆಗ ಪ್ರೆಸಿಡೆಂಟರು ಕೌನ್ಸಿಲ್ ಕೆಲಸವನ್ನು ಸ್ವಲ್ಪ ಸಮಯ ಮುಂದೆ ಹಾಕಿಸರು. ಪೊಲೀಸರು ಈ ಸಂಬಂಧವಾಗಿ 9 ಮಂದಿಯನ್ನು ದಸ್ತಗಿರಿ ಮಾಡಿದರು. ಇವರಲ್ಲಿ 4 ಮಂದಿಯ ಹೊರತು ಇತರರು ಬರೀ ಪ್ರೇಕ್ಷಕರಾಗಿ ಬಂದುದೆಂಬುದು ರುಜುವಾದರೆ ಬಿಡಲ್ಪಡಲಿರುವರು. ಜನವರಿ ತಾ. 28ರಲ್ಲು ಡಾಕ್ಟರ್ ಸುಬ್ಬರಾಯನು ಅಧ್ಯಕ್ಷತೆಯಲ್ಲಿ ಪ್ರೆಸಿಡೆನ್ಸಿ ಕೊಲೆಜ್ ದಿನವಾಚರಿಸಲ್ಪಡುತ್ತಿದ್ದಾಗ ಕಾಂಗ್ರೆಸ್ ಸ್ವಯಂ ಸೇವಕನೊಬ್ಬನು ಪಟಾಕಿ ಮೂಲೆ ಸುಟ್ಟು ಸಭಿಕರ ನಡುವೆ ಬಿಸಾಡಿ ಸ್ವಲ್ಪ ಗಲಾಟೆಯಾಯಿತು.

ವಿದೇಶ.

ಡಚ್ಚರ ನಾಡಿನ ಇಲಾಖೆಯಲ್ಲಿ ಸಂಬಳ ಕಡಿದ ಫಲವಾಗಿ ನೂರಾರು ಕೆಲಸಗಾರರು ದಂಗೆ ಎದ್ದು 425 ದಸ್ತಗಿರಿಗಳಾಗಿವೆ.

ಉತ್ತರಧ್ರುವದ ಸೆವಿಸ ವಾಂಗ್ವೇಲ್ ದ್ವೀಪದ ಒಂದು ಹಳ್ಳದಲ್ಲಿ ಪೂರ್ವಕಾಲದಲ್ಲಿ ಯಾರೋ ಇಟ್ಟಿದ್ದ ಬಲು ದೊಡ್ಡ 52 ಹಸ್ಕಿದಂತಗಳು ದೊರೆತಿವೆ. ಇವುಗಳ ಭಾರವು 3000 ಟನ್ನ್‌ಗಳಂತೆ!

1929 ನೇ ಇಸವಿಯಿಂದ ಮೌನವಾಗಿದ್ದ ಲೆಸುವಿಯಸ್ ಪರ್ವತವು ಈಗ ಮತ್ತೊಂದೆಡೆಯಲ್ಲಿ ಬಾಯ್ತೆರೆದು ಜ್ವಾಲೆಗಳನ್ನು ಹೊರಗೆಡಹುತ್ತಿದೆ. ಬುಡದಲ್ಲಿ ವಾಸಿಸುತ್ತಿದ್ದ ಜನರು ಮನೆಮಠಗಳನ್ನು ಬಿಟ್ಟು ಪಲಾಯನ ಮಾಡುತ್ತಲಿರುವರು.

ಟೋಕಿಯೋ ನಗರದ ಕ್ಯೂಶಿಡೆಂಟಲ್ ಕಾಲೇಜಿನ ಪ್ರೊಫೆಸರೊಬ್ಬರು ತಾನು ಪ್ರಾಣಿಗಳ ಹಲ್ಲನ್ನು ಮನುಷ್ಯರಿಗಿಟ್ಟು ಕಸಿಮಾಡಬಲ್ಲೆನೆನ್ನುವರು. ಈ ವೊದಲು ಇವರು ಯಶಸ್ವಿಯಾಗಿ ಮನುಷ್ಯರ ಹಲ್ಲುಗಳನ್ನು ಅಳಿಲುಗಳಿಗೂ ಮೃಗಗಳಿಗೂ ಇಟ್ಟು ಕಸಿಮಾಡಿರುವರಂತೆ.

ಖ್ಯಾತಿತಾ ಕಡ ಎಂಬವನು ಜಪಾನ್ ಸಾಮ್ರಾಟರ ಕೊಲೆಗೆತ್ನಿಸಿದನೆಂದು ಪ್ರಾಣ ಶಿಕ್ಷೆ ವಿಧಿಸಲ್ಪಟ್ಟಿತು. ಆದರೆ ಆ ತೀರ್ಪನ್ನು ರದ್ದುಮಾಡಿ ಅವನ್ನು ಕಾರಾಗೃಹ ವಾಸವನ್ನು ವಿಧಿಸಿದರು. ಕಳೆದ ತಿಂಗಳಲ್ಲಿ ವಿಕಕ್ಕಾಗಿಯೋ ಬಿಡುಗಡೆ ಹೊಂದಿದನು. ಅದೇ ದಿನ ವೋಟಾರು ಲಾರಿಯಡಿಗೆ ಬಿದ್ದು ಮೃತಿಹೊಂದಿದನು.

ಕ್ಷಯರೋಗ.

ಈಗ ಪ್ರಪಂಚದಲ್ಲಿ ಕ್ಷಯರೋಗದಿಂದ ಉಂಟಾಗುತ್ತಿರುವ ಅನಾಹುತಗಳಿಗೆ ಕಾರಣಗಳೇನೆಂಬುದು ಉಂಟುರೋಗಗಳನ್ನು ಅಧ್ಯಯನ ಮಾಡತಕ್ಕ ವಿದ್ಯಾರ್ಥಿಗಳೆಲ್ಲರಿಗೂ ಕಳವಳ ಹಿಡಿಸಿದೆ. ದೇಶದಲ್ಲಿ ಧನ ಸಮೃದ್ಧಿ ಹೆಚ್ಚಿದಂತೆಲ್ಲಾ ಈ ರೋಗದ ವ್ಯಾಪ್ತಿಯು ಕಡಿವೆ ಯಾಗುವುದು; ಅದಕ್ಕೆ ಬದಲಾಗಿ ಬಡತನವು ಹೆಚ್ಚಿದರೆ ಈ ರೋಗದಿಂದ ನರಳುವವರೂ ಮತ್ತು ಸಾಯುವವರೂ ಹೆಚ್ಚುವರು. ಕ್ಷಯರೋಗಕ್ಕೆ ಬರೀ ಇದೊಂದೇ ಕಾರಣವೆಂದು ಊಹಿಸಲಾಗದು. ಈಗ ಸಾಮಾನ್ಯವಾಗಿ ಕ್ಷಯರೋಗವು ಆಹಾರದಿಂದ ಉಂಟಾಗತಕ್ಕದ್ದೆಂದು ತಿಳಿದುಬಂದಿದೆ. ಜನಸಂಖ್ಯೆಯು ಹೆಚ್ಚಿದಂತೆಲ್ಲಾ, ಜನಾಂಗದ ಆದಾಯವು ಕಮ್ಮಿಯಾದಂತೆಲ್ಲಾ ಈ ರೋಗದಿಂದ ಸಾಯುವವರ ಸಂಖ್ಯೆಯು ಹೆಚ್ಚುವುದು. ಉಗುಳುವುದು, ಜನಗಳ ಮೂಢತನ, ಅಶುಚಿ, ಅನಾರೋಗ್ಯಕರವಾದ ಕೆಲವು ಪದ್ಧತಿಗಳು ಇವುಗಳಿಂದ ಉಂಟು ಜಾಡ್ಯಗಳು ಹರಡುವುವೆಂದು ತೋಳುವರು. ಇವುಗಳೂ ಉಂಟುರೋಗದಂಥಾ ಜಾಡ್ಯ

ಗಳಿ ಹರಡುವಿಕೆಗೆ ಸಹಾಯ ಮಾಡುವುವು. ಆದರೆ ಇದಕ್ಕೆಲ್ಲ ಮುಖ್ಯ ಕಾರಣ ಬೊಂಬಿದೆಯೆಂಬುದನ್ನು ಯಾರೂ ಮರೆಯಬಾರದು. ಸಾಕಾದಷ್ಟು ಆಹಾರ ಪದಾರ್ಥಗಳು, ಪೋಷಣೆ ಇವುಗಳಿಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ.

ಇವುಗಳ ಹರಡುವಿಕೆಯ ವಿಷಯದಲ್ಲಿ ಜನರಿಗೆಲ್ಲ ಎಷ್ಟೋ ಬೋಧಿಸಿದ್ದಾಗಿದೆ. ಕ್ಷಯರೋಗದ ಕ್ರಿಮಿಗಳ ಉತ್ಪತ್ತಿ, ಅವುಗಳಿಂದಾಗುವ ಅನಾಹುತಗಳು, ಮುಂದಾಲೋಚನೆಯಿಲ್ಲದೆ ಉಗುಳುವುದರಿಂದ ಗಾಳಿಯಲ್ಲಿ ಈ ಕ್ರಿಮಿಗಳ ವ್ಯಾಪಕತೆ, ಅವರವರ ಆರೋಗ್ಯದ ವಿಷಯದಲ್ಲಿ ಸರಿಯಾಗಿ ಎಚ್ಚರಿಕೆ ತೆಗೆದುಕೊಳ್ಳದಿರುವುದು ಈ ವಿಷಯಗಳ ಮೇಲೆಲ್ಲ ಜನರಿಗೆ ಎಷ್ಟೋ ತಿಳಿಸಿದ್ದಾಗಿದೆ. ಮುಖ್ಯವಾದ ವಿಷಯದ ಮೇಲೆ ಅವರ ಗಮನವೇ ಬಿದ್ದರಿಕೆ ತೋರಲಿಲ್ಲ. ಒಂದು ವೇಳೆ ಉಗುಳುವುದನ್ನು ಕಾನೂನಿನಿಂದ ನಿಲ್ಲಿಸಿ, ಸರಕಾರದವರ ಸಹಾಯದಿಂದ ಜನಗಳೆಲ್ಲರೂ ಶುಚಿಯೂಗಿರಬೇಕೆಂದೇ ನಿರ್ಬಂಧಪಡಿಸಿದರೆಂದು ಇಟ್ಟುಕೊಳ್ಳೋಣ. ಜನ ಸಮುದಾಯವು ಬಡತನದ ಬೇಗೆಯಿಂದ ಬೆಂದು ಹೊಟ್ಟೆಗೆ ಅನ್ನವಿಲ್ಲದೆ ಬೇಸತ್ತು ಒಳಲಿರುವಾಗ ನಿಮ್ಮ ಕಾನೂನುಗಳಿಂದೇನು ಪ್ರಯೋಜನ? ಇದರಿಂದ ಕ್ಷಯರೋಗದಿಂದ ನರಳಿ ಪ್ರಾಣ ಬಿಡುವವರ ಸಂಖ್ಯೆಯು ಕಡಿಮೆಯಾಗುವುದೇ? ಇದಕ್ಕೆ 'ಇಲ್ಲ' ಎಂಬುದೊಂದೇ ನಿರ್ದಿಷ್ಟವಾದ ಉತ್ತರ ವಿದ್ಯಾಬೋಧನೆ, ಶಾಸ್ತ್ರವಾಂಡಿತ್ಯ, ಪ್ರಚಾರಕಾರ್ಯ, ಕ್ಷಯರೋಗ ಚಿಕಿತ್ಸೆಯ ವಿಷಯವಾಗಿ ಬೋಧನೆ, ಮಕ್ಕಳ ಪೋಷಣೆ ಇವುಗಳಿಂದ ನಮ್ಮ ಆಧುನಿಕ ಪ್ರಪಂಚದಲ್ಲಿ ಕ್ಷಯರೋಗದ ವ್ಯಾಪ್ತಿಯು ಕಡಿಮೆಯಾಗಿರುವುದೆಂದು ಹೇಳುವುದು ಪೂರಾ ಅಸಮಂಜಸವಾದ ಮಾತು. ಮೇಲೆ ಹೇಳಿದವುಗಳಲ್ಲಿ ಯಾವ ದೇಶಗಳಲ್ಲಿ ವಿಶೇಷವೀಗಿವೆಯೋ ಆ ದೇಶಗಳಲ್ಲಿ ಧನ ಸಮೃದ್ಧಿಯು ಹೆಚ್ಚಾಗಿದೆಯೆಂದೂ, ಜನಗಳಿಗೆ ಒಳ್ಳೆಯ ಅನುಕೂಲ್ಯಗಳವೆಯೆಂದೂ ಆದ್ದರಿಂದ ಅಲ್ಲಿಯ ಜನಗಳು ನಾಗರೀಕತೆ, ಶುಚಿತ್ವ ಮುಂತಾದುವುಗಳಲ್ಲಿ ಬಹಳ ಮುಂದುವರಿದಿರುವರೆಂದೂ ಧಾರಾಳವಾಗಿ ಊಹಿಸಬಹುದು. ಒಂದು ಶತಮಾನದಿಂದ ಇಂಡಿಯಾದಲ್ಲಿ ಪಾಶ್ಚಿಮಾತ್ಯ ವಿದ್ಯಾಪ್ರಸಾರವಾಗುತ್ತಿದ್ದರೂ ಈ ಕ್ಷಯರೋಗದಿಂದ ಧ್ವಂಸವಾಗುವವರ ಸಂಖ್ಯೆ ಕಡಿಮೆಯಾಗಿರುವುದೇನು? ಇಲ್ಲ; ಕಮ್ಮಿಯಾಗುವುದಕ್ಕೆ ಬದಲಾಗಿ ಅದರ ಭಾಧೆಯು ಹೆಚ್ಚಾಗಿದೆ. ಈಗ ಇಂಡಿಯಾದಲ್ಲಿ ಪ್ರತಿ ವರ್ಷವೂ ೧,೬೦,೦೦೦ ಜನಗಳು ಈ ರೋಗದಿಂದ ನರಳಿ ಪ್ರಾಣ ಬಿಡುತ್ತಿರುವರು. [ಸುಮಾರು ೧೦೦, ೧೫೦ ವರ್ಷಗಳ ಹಿಂದೆ ಇದರಲ್ಲಿ ಅರ್ಧಭಾಗ ಮಾತ್ರ ಈ ರೋಗಕ್ಕೆ ಶುತ್ತಾಗುತ್ತಿದ್ದರಿಂದ ಊಹಿಸಲ್ಪಟ್ಟಿದೆ] ಜನಸಂಖ್ಯೆಯು ಒಂದೇ ಸಮನಾಗಿ ವೃದ್ಧಿಯಾಗುತ್ತಿರುವುದು, ಜೀವನದ ಬೆಲೆಯು ಹೆಚ್ಚಿರುವುದು, ಅನುಕೂಲ್ಯತೆಗಳು ಕಮ್ಮಿಯಾಗಿರುವುದು, ನಮ್ಮ ದೇಹಕ್ಕೆ ಪೋಷಣೆ ಕೊಡುವ 'ವೈಟಮಿನ್' ಎಂಬ ಪದಾರ್ಥವಿಲ್ಲದ ಆಹಾರವನ್ನು ತಿನ್ನುವುದು, (ಇದು ನಮ್ಮ ಆಧುನಿಕ ಯಂತ್ರ ಸೃಷ್ಟಿಯ ಪ್ರಭಾವ) ಇವುಗಳಿಂದ ಆಯೂ ಮನುಷ್ಯನ ವರಮಾನ ಮತ್ತು ಕೊಂಡುಕೊಳ್ಳುವ ಸಾಮರ್ಥ್ಯವು ಬಹಳ ಕಡಿಮೆಯಾಗಿದೆ. 'ವೈಟಮಿನ್' ಪದಾರ್ಥವಿಲ್ಲದ ಹಾಲು, (ಮೂಡಿ ಹಾಲು) ಹೊಳುಪು ಕೊಟ್ಟು ಯಂತ್ರಗಳಲ್ಲಿ ಕುಟ್ಟಿಸಿದ ಅಕ್ಕಿ, ನೂನುತೀಕೃತವಾದ ಬಿಸ್ಕತ್ತು, ಮೊದಲಾದ ಆಹಾರ ಪದಾರ್ಥಗಳು, ನಮ್ಮ ಪುಷ್ಟಿಗಲ್ಲದೆ ಬರೀ ನಾಲಗೆಯ ಚಪಲಕ್ಕಾಗಿಯೇ. ಕುಡಿಯುವ ರುಚಿಕರವಾದ 'ಟಿ', ಕಾಫಿಗಳು ಇವುಗಳಿಂದ ದೇಹಗಳು ದುರ್ಬಲಹೊಂದಿ ಆಹಾರ ಸಂಬಂಧವಾದ ಕ್ಷಯರೋಗಗಳೇ ಮುಂತಾದುವುಗಳು ಪ್ರವಾಹದಂತೆ ನಮ್ಮ ಕಡೆಗೆ ಒರುವುದಕ್ಕೆ ಕಾರಣವಾಗಿದೆ. ಆಧುನಿಕ ಸುಧಾರಣೆಗಳಿಂದ ಕಾಲರ, ಸಿಡುಬು ಮುಂತಾದ ರೋಗಗಳು ಮಾತ್ರ ಕೂಡಿಮೆಯಾಗುತ್ತಿವೆ.

ಆದ್ದರಿಂದ ವರಮಾನದ ಕೊರತೆ, ತಕ್ಕಷ್ಟು ಹೊಟ್ಟೆಗಿಲ್ಲದಿರುವುದು, ಇವುಗಳಿಂದ ಉಂಟಾಗುವ ಶರೀರ ದೌರ್ಬಲ್ಯ ಇದಕ್ಕೆಲ್ಲ ಕಾರಣವಾದ ಜನತೆಯ ದಾರಿದ್ರ್ಯವೇ ಕ್ಷಯರೋಗಕ್ಕೆ ಮುಖ್ಯ ಕಾರಣವಾದದ್ದು. ತಾವು ಎಷ್ಟು ತಿನ್ನಬೇಕೆಂಬುದನ್ನೇ ಅರಿಯದ ಅನೇಕ ಧನಿಕರಿರುವರು; ಇದಕ್ಕಿಂತ ಹೆಚ್ಚಾಗಿ ಸಾಕಾದಷ್ಟು ಆರೋಗ್ಯಕರವಾದ, ಪುಷ್ಟಿಕರವಾದ ಆಹಾರವೇ ಇಲ್ಲದಿರುವವರಿರುವರು. ಅಂತು ಹೊಟ್ಟೆಗಿಲ್ಲದ ಬಡಜನರೇ ಈ ರೋಗಕ್ಕೆ ಹೆಚ್ಚಾಗಿ ಶುತ್ತಾಗುವವರೆಂಬುದು ಸಿದ್ಧಾಂತವಾಗಿದೆ.

ಉಗುಳದಂತೆ ಕಾನೂನು ಮಾಡುವುದು, ಕ್ಷಯರೋಗ ವಿಚಾರದಲ್ಲಿ ಬೋಧಿಸುವುದು ಇವುಗಳಿಗಿಂತ ಪ್ರಜೋತ್ಪತ್ತಿಯನ್ನು ತಡೆಯುವುದು ಮತ್ತು ಬಹಳ ದಿವಸಗಳ ನಂತರ ಮದುವೆ ಮಾಡಿಕೊಳ್ಳುವುದು, ರಾಷ್ಟ್ರೀಯ ಭಾವನೆಯನ್ನು ಅಭಿವೃದ್ಧಿ ಗೊಳಿಸುವುದು. ಕೈಗಾರಿಕೆ ಮೊದಲಾದ ಉದ್ಯಮಗಳಲ್ಲಿ ಮುಂದುವರಿಯುವುದು, ಒಳ್ಳೆಯ ಕೃಷಿ, ಪರಸ್ಪರ ಸಹಾಯ ಸಂಘಗಳಿಂದ ಬಡ ರೈತಾಪಿ ಜನರೇ ಮೊದಲಾದವರಿಗೆ ದ್ರವ್ಯ ಸಹಾಯವನ್ನೊದಗಿಸುವುದು, ಮತ್ತು ಜನತೆಯ ಆರ್ಥಿಕ ಸ್ಥಿತಿಯನ್ನು ಬಲಪಡಿಸಿ ಅವರಿಗೆ ಯಥೇಚ್ಛವಾಗಿ ತಿನ್ನುವುದಕ್ಕೆ ಅವಕಾಶವನ್ನು ಕಲ್ಪಿಸುವ ವರ್ಗಗಳು ಈ ಕ್ಷಯರೋಗದ ವ್ಯಾಪ್ತಿಯನ್ನು ತಕ್ಕಮಟ್ಟಿಗೆ ಹತೋಟಿಗೆ ತರುವುವು. ಜನರ ಸಂಪಾದನೆ, ಜನತೆಯ ಧನಸಮೃದ್ಧಿ ಇವೆರಡೇ ಕ್ಷಯರೋಗದ ನಿವಾರಣೆಗೆ ಮುಖ್ಯವಾದುವು. ಈಗ ಇಂಡಿಯಾಕ್ಕೆ ಬೇಕಾಗಿರುವುದೂ ಇವೆರಡೆ.

ಎ. ಕ.

ಶ್ರೀ ಕೃಷ್ಣ.

ಶ್ರೀ ಕೃಷ್ಣನೆಲ್ಲಿರುವನೂ ಅಮ್ಮಾ ಶ್ರೀ ಕೃಷ್ಣನೆಲ್ಲಿರುವನೂ?
ಶ್ರೀ ಕೃಷ್ಣನಿಲ್ಲಿರುವನೂ ಕಂದಾ ಶ್ರೀ ಕೃಷ್ಣನಲ್ಲಿರುವನೂ
ಮಜ್ಜಿಗೆ ಕಡೆಯುವ ಕಡುಗೋಲ ಬುಡದಲ್ಲಿ
ಅಜ್ಜಿಯು ನೊರೆಹಾಲ ಕರೆಯುವ ಕಾವಲ್ಲಿ
ಅಜ್ಜನು ಗೋವುಗಳ ಕಾಯುವ ಬೈಲಲ್ಲಿ ॥ ೧ ॥

ಶ್ರೀ ಕೃಷ್ಣನಿಲ್ಲಿರುವನೂ ಕಂದಾ ಶ್ರೀ ಕೃಷ್ಣನಲ್ಲಿರುವನೂ
ದೆಣ್ಣೆಯ ತೆಗೆಯುವ ಕನ್ನೆಯ ಕೈಯಲ್ಲಿ
ಕಣ್ಣೋರೆ ನೋಡುವ ಯುವತಿಯ ನಗುವಲ್ಲಿ
ಬಣ್ಣಾದ ಸೀರೆಯ ಉಟ್ಟೂ ಮೆರೆವಲ್ಲಿ ॥ ೨ ॥

ಶ್ರೀ ಕೃಷ್ಣನಿಲ್ಲಿರುವನೂ ಕಂದಾ ಶ್ರೀ ಕೃಷ್ಣನಲ್ಲಿರುವನೂ
ಗುರುಭಕ್ತಿ ತಾನಾಗಿ ಜನಿಸುವ ಸ್ಥಳದಲ್ಲಿ
ಹಿರಿಯರು ನಡೆಸುವ ಸಭೆಗಳ ಮಧ್ಯದಿ
ಗುರುತರದ ಕಷ್ಟವೆ ಸಹಿಸುವ ಜಾಗದಿ ॥ ೩ ॥

ಶ್ರೀ ಕೃಷ್ಣನಿಲ್ಲಿರುವನೂ ಕಂದಾ ಶ್ರೀ ಕೃಷ್ಣನಲ್ಲಿರುವನೂ
ಸುರಿಯುವ ಮಳೆಯಲ್ಲಿ ಊಳುವ ಜನರಲ್ಲಿ
ಉರಿಯುವ ಬಿಸಿಲಲ್ಲಿ ದುಡಿಯುವ ಜನರಲ್ಲಿ
ಮೊರೆಯುವ ಕಡಲಲ್ಲಿ ತೇಲುವ ಜನರಲ್ಲಿ ॥ ೪ ॥

ಶ್ರೀ ಕೃಷ್ಣನಿಲ್ಲಿರುವನೂ ಕಂದಾ ಶ್ರೀ ಕೃಷ್ಣನಲ್ಲಿರುವನೂ
ಕೆಟ್ಟ ಜನರೆಂದು ಪುಟ್ಟುವ ತಾವಲ್ಲಿ
ನಟ್ಟನೆ ದಾರಿಯ ನಡೆಯ ಮರೆತಲ್ಲಿ
ಪುಟ್ಟ ಪ್ರಹ್ಲಾದನ ಕಟ್ಟಿ ಹೊಡೆದಲ್ಲಿ ॥ ೫ ॥

ಶ್ರೀ ಕೃಷ್ಣನಿಲ್ಲಿರುವನೂ ಕಂದಾ ಶ್ರೀ ಕೃಷ್ಣನಲ್ಲಿರುವನೂ
ಗಗನದ ಮಧ್ಯದಿ ಭಗವಂತನಿರುವನು
ನಗುವನು ರವಿದೇವನಿರ್ಗುಣಿಯನು ಕಂಡು
ಮಗುವ ನೀನರಿದಿರು ಜಗವೆಲ್ಲ ಅವನದೆ. ॥ ೬ ॥

ಶ್ರೀ ಕೃಷ್ಣನಿಲ್ಲಿರುವನೂ ಕಂದಾ ಶ್ರೀ ಕೃಷ್ಣನಲ್ಲಿರುವನೂ

ನ. ಚಿ. ಸುಬ್ಬಯ್ಯ.

ಪತ್ರವ್ಯವಹಾರ.

[ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಎಲ್ಲಿಯಾದರೂ ಕೇಳಿದ್ದೀರಾ.

ಇಡೀ ದೇಶವೇ ಕ್ಷಾಮವಬಂದ ಹಾಗೆ ಪೇಚಾಡುತ್ತಿದೆ. ಒತ್ತಕ್ಕೆ ದೆಲೆ ಇಲ್ಲದೆ ನಮ್ಮ ಜನರ ಕಷ್ಟ ಒಂದು. ಅದರಲ್ಲಿ ಕಳೆದ ಮಳೆಗಾಲವು ಜೋರಾಗಿ ಬತ್ತದ ಬೆಳೆಯೂ ಕಮ್ಮಿಯೂವ ದಿಕ್ಕಿಗಾಗಿ ನೋಡಿದರೂ ನಮ್ಮ ಸರಕಾರದವರು ಕಂದಾಯ ಕಮ್ಮಿ ಮಾಡುವದಂತು ಕಾಣುವದಿಲ್ಲ. ಇದರ ಜತೆಗೆ ಕಳೆದ ವರ್ಷ ಕೆಲವು ಜನರು ಏನೋ ತೊಂದರೆಗಳಿಂದ ಕಂದಾಯ ಕಟ್ಟಲಿಕ್ಕೆ ಸ್ವಲ ತೊಂದರೆಯಾಯಿತೆಂದು ಶ್ರೀಮಂಗಲನಾಡಿನ ಪಾರುಪತ್ಯಗಾರರು ಫೆಬ್ರವರಿ ಒಂದು ಆಗುವದಕ್ಕೆ ಮೊದಲೇ ಎಂದರೆ ಕಂದಾಯದ ಕಂತು ಸೇರು ಆಗುವುದಕ್ಕೆ ಮೊದಲೇ ಒಂದು ಬೆಳೆ ಪಸಲುಗಳನ್ನು ಜಪ್ತಿಗೆ ತೆಗೆದಿದ್ದಾರೆ. ಇದರಿಂದ ರೈತರಿಗೆ ಎಷ್ಟು ಕಷ್ಟವಾಗಬಹುದು ಎಂಬದನ್ನು ಸರಕಾರದವರು ಊಹಿಸುವ ಹಾಗೆ ಕಾಣುವದೇ ಇಲ್ಲ. ಈಗಾಗಲೇ ಪೊನ್ನಂಪೇಟೆಯಲ್ಲಿ ಸ್ಟೋರ್ ಎಂಟಿಂಗಿನಲ್ಲಿ ಕಂದಾಯದ ಕಂತನ್ನು ಹೆಚ್ಚಿಸಿಕೊಡಬೇಕೆಂದು ಕಮಿಶನರ್ ನ್ನು ಕೇಳಿದಲ್ಲು ಅವರು ಯೋಚಿಸುತ್ತೇನೆಂದು ಹೇಳಿದರು. ಆದರೆ ಈ ಕಡೆ ಒಂದು ತರದ ನಾಟಕ ದಯವೂಡಿ ಇದನ್ನೆಲ್ಲಾ ಜನರಿಗೆ ನೋಟೀಸು ಮೂಲಕ ತಿಳಿಸಬೇಕಾಗಿ ಬೇಡಿಕೊಳ್ಳುತ್ತೇವೆ. ಮನನೊಂದವ.

ನೀರಿನ ಆಸೆಗೆ ಕೇಡು.

ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ರಸ್ತೆಯಲ್ಲಿ ಮಡಿಕೇರಿಯಿಂದ ಸುಮಾರು ಅರ್ಧ ಮೈಲು ದೂರದಲ್ಲಿ ನೀರಿನ ಆಸೆ ಇರುವ ಒಂದು ಒಬ್ಬೆ ಇದೆ. ಇದು ಕಲ್ಲು ಒಡೆಯುವ ಒಂಡೆಯ ಬದಿಯಲ್ಲಿದೆ. ಈ ಒಬ್ಬೆಯಿಂದ ನೀರು ಹರಿದು ಬರುತ್ತದೆ. ಬೇಸಿಗೆಯಲ್ಲಿ ಸಹ ಆರುವುದಿಲ್ಲ. ಈ ಒಬ್ಬೆಯಲ್ಲಿ ತುಂಬಾ ಮರಗಳುಳ್ಳ ಮರ ಕಾಡಾಗಿತ್ತು. ಈಗ ಆ ಒಬ್ಬೆಯಲ್ಲಿದ್ದ ಮರಗಳನ್ನೆಲ್ಲಾ ಕತ್ತರಿಸಿ ಸಾಗಿಸಿ ಮಾಡುತ್ತಿದ್ದಾರೆ. ಸಾಗಿಯ ತುಂಡಿನ ಬುಡ್ಡ ನೋಡಿದರೆ ಇಂಜಿನೀಯರಿಂಗ್ ಇಲಾಖೆಯ ರಸ್ತೆ ಸರಿಮಾಡುವ ಸ್ಟೀಮ್ ಇಂಜಿನಿನ ಉಪಯೋಗಕ್ಕಾಗಿ ಕತ್ತರಿಸುತ್ತಿರುವಂತೆ ಕಾಣುತ್ತದೆ. ಸರ್ಕಾರಿ ಇಲಾಖೆಯ ಇಂಜಿನಿಗೆ ಬೇಕಾದ ಸಾಗಿಯು ಈ ಕಾಡುಸೀಮೆಯಲ್ಲಿ ಇನ್ನೆಲ್ಲಿಯೂ ದೊರೆಯುವುದಿಲ್ಲವೇ? ಮಡಿಕೇರಿ ಬಳಿಘಾಟಿಸ್ಥನಲ್ಲಿ ಬೆಳೆಯಿಸುವ ಸಾಗಿಯನ್ನು ಕೊಡಬಾರದೇ?

ದೇಶದ ಎಲ್ಲಾ ಭಾಗಗಳಲ್ಲೂ ಜನರು ವಾಸವಿರುವ ಸ್ಥಳಗಳಿಂದ ದೂರವಾದ ಬೆಟ್ಟ ಸೀಮೆಗಳಲ್ಲೂ ಸಹ ಸರ್ಕಾರಿ ರೆವಿನ್ಯೂ ಇಲಾಖೆಯವರು ಖರ್ಚು ಕೊಟ್ಟು ಇಂಥಾ ನೀರಿನ ಆಸರೆಗಳಲ್ಲಿರುವ ಮರ ಮಂಡಿ ಸುಟ್ಟು ಹೋಗಿ ನೀರಿನ ವರತೆಗಳು ಬತ್ತಿ ಹೋಗಬಾರದೆಂತ ಅಂಥಾ ಒಬ್ಬೆಗಳ ಅಜು ಬಾಜು ಇರುವ ಒಣಗಿದ ಹುಲ್ಲನ್ನು ಬೆಂಕಿ ಕೊಟ್ಟು ಸುಡಿಸುತ್ತಾರೆ. ಇಂಥಾ ಕೆಲಸವಾಯಿತೋ ಎಂಬದಕ್ಕೆ ಮೇಲಧಿಕಾರಿಗಳಿಗೆ ಪಟೇಲರ್‌ಗಳು ರಿಪೋರ್ಟು ಕಳುಹಿಸಬೇಕೆಂತ ನಿಯಮವಿದೆಯೆಂತ ಕೇಳಿದ್ದೇನೆ. ಅಲ್ಲದೆ ಎಂಥಾ ಬೆಟ್ಟ ಪ್ರದೇಶಗಳನ್ನು ರೈತರಿಗೆ ವ್ಯವಸಾಯಕ್ಕೆ ಕೊಡುವಾಗ ನೀರಿನ ಆಸರೆಗಳಲ್ಲಿರುವ ಮರ ಮಂಡಿ ನಾಶವಾಗದಂತೆ ಅಂಥಾ ಒಬ್ಬೆಗಳನ್ನು ಉಳಿಸಿ ಅಜು ಬಾಜು ಜಾಗಗಳನ್ನು ಮಾತ್ರ ಕೊಡುತ್ತಾರೆ. ನೂರೊಕ್ಕುನಾಡು ಶ್ರೀಮಂಗಲ ಗ್ರಾಮದಲ್ಲಿ ಡಬ್ಲ್ಯೂ ರೆನ್ ಎಂಬ ತೋಟದಲ್ಲಿ ಇಂಥಾ ಒಬ್ಬೆಗಳು ಅನೇಕ ವ್ಯವಸಾಯವಾಗದೆ ಪೈಸಾರಿಯೂಗಿಯೇ ಇರುವುದು ಕಂಡು ಬರುತ್ತದೆ. ಹೀಗಿರುವಾಗ ಮಡಿಕೇರಿ ಬಳಿ ಈ ರೀತಿ ನೀರಿನ ಆಸರೆಗೆ ಅಪಾಯವಾಗುವಂತೆ ಮರ ಕಡಿಯಲು ರೆವಿನ್ಯೂ ಇಲಾಖೆಯವರು ಹೇಗೆ ಬಿಟ್ಟರೋ ತಿಳಿಯುವುದಿಲ್ಲ.

ಈ ನೀರು ರಸ್ತೆಯ ಬದಿಯಲ್ಲಿ ಹರಿದು ದಾರಿ ಹೋಕ ಜನರಿಗೂ ಪ್ರಾಣಿಗಳಿಗೂ ಅನುಕೂಲವಾಗಿರುವುದೂ ಅಲ್ಲದೆ ಕೆಳಗೆ ಹರಿದು ಕಾಟಕೇರಿ, ಮೇಕೇರಿ ಗ್ರಾಮದವರಿಗೆ ವ್ಯವಸಾಯಗಾರರಿಗೆ ಅತ್ಯವಶ್ಯವಾದ ನೀರಾಗಿದೆ. ಇದರಿಂದ ನಾಲೆ ತೆಗೆದುಕೊಂಡು ಹೋಗಿ ಜೆಟ್ಟಿಳಿ ಮನೆಯವರು ತಂಬಾ ಜಮೀನುಗಳನ್ನು ವ್ಯವಸಾಯ ಮಾಡುತ್ತಾರೆ. ಹೀಗಿರುತ್ತಾ ಇಂಥಾ ನೀರಿನ ಆಸರೆಯು ಹಾಳಾಗದಂತೆ ಕಾವಾಡುವದು ಸರ್ಕಾರದ ಕರ್ತವ್ಯವಾಗಿದೆ. ಈ ರೀತಿ ಊರಿಗೆ ಕೆಡಕಾಗುವ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿರುವ ಕೆಲಸವನ್ನು ಮಾಡಿದ ಅಧಿಕಾರಿಗಳಿಗೆ ಶಿಕ್ಷೆ ಕೊಟ್ಟು ಪುನಹ ಆ ಒಬ್ಬೆಯಲ್ಲಿ ಮರಕಾಡು ಬೆಳೆಯುವಂತೆ ಮಾಡಬೇಕಾಗಿದೆ. ಗ್ರಾಮವಾಸಿ.

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

52—22

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಆ ಜ ವಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00,000	28.2

ಬೋನಸ್ಸು.

ತುರ್ತು ನಷ್ಟೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಸ್ಯಯೋಜನೆ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟಿಡೆಂಟ್
52—41 ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

Wanted.

Assets 17500000 Exeeeds.	Pre—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO., LTD., Calcutta. (Est. 1906.)

Please apply to—

CHIEF ORGANISER,
National Insurance Co., Ltd.,
Arcot Srinivas Char St.,
12—7 Bangalore City.

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ ೧೯೩೩

ಜ್ವರದ ಗುಳಿಗೆಗಳು.

ಜಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—25) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ.

ಇಂಡಿಯೂ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮುಶಾಯಿ 31% ಮಾತ್ರ.

ಇಂಡಿಯೂ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಿಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ವಿಲ್ಲಾ,'
(12—10) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಸಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ್ 1ನೇ ತಾರೀಕಿನೊಳಗೆ ಹಕ್ಕಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸ್
ಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ
ಮತ್ತು
1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯೂ
ಲೈಫ್ ಬಿಲ್ಡಿಂಗ್,
52—18 ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

ಯು. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವಸಿದ್ಧ ಔಷಧಗಳು.

೧. **ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಜಳಜ್ವರ, ಮಲಬದ್ಧತೆ, ಕೈಕಾಲು ಒಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. **ಅಶೋಕಾರಿಷ್ಟ ಮತ್ತು ಮೂತ್ರ**—ಹೆಂಗಸರ ಮಟ್ಟಪೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂಶಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೂತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. **ಬಾಲಾಗ್ರಹ ಗುಟಿಕೆ**—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0. (52—19)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,950— 0—0
ಜಮೂಬಂದ ಠೇವಣಾತಿ	—	22,8525—10—8
ವಸೂಲಾದ ಕ್ಷೇಮನಿಧಿ	—	48,840— 3—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5--0--0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟವೂಡ ದೇವೈಯ್ಯನವರು,
ಕಾವ್ ಬಹದ್ದೂರ್.

ಡೈರೆಕ್ಟರ್
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಮನೆಯಪಂಡ ಯಂ. ಬೆಳ್ಯಪ್ಪನವರು.

ತಾರೀಕು 1—1—1933.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಪಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೇ. ಮನೆಯಪಂಡ ಯಂ. ಬಿದ್ದಪ್ಪನವರು,

ಉತ್ತರ ಕೊಡಗಿಗೆ ಹೆಚ್. ಚೌರಿರ ಮಾದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು, (ಜಾದಿಭಂಡಾರಿ.)

ಅಮ್ಮತ್ತಿ—ಸಿಜ್ಜಾ ಹುರ—ಮೆ. ಐನಂಡ ಪೂದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು,

ಪುತ್ತು, ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮೂದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ಧನಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ಧನಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ಧನಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಗಳು ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮು ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೆ ಖರ್ಚಿನ ರಿಜಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3231 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಎಂದೂ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ವೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ [52—49

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.
52—4

ಕಾಡುಗ ಬರೆದರೆ ಆಗಿನ
ಕ್ಯಾಟಲಾಗು ಮೂಫಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬಚ್ಚಿಗಳು, ಕೋಟೆಗಳು, ಕೇಪ್ಸುಗಳು, ಮುನ್ನು ಮುತು! ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,

Largest Importers of Firearms and Ammunition
Cheapest priced firm in India,

26—22 **210 Abdul Rehiman Street, BOMBAY.**

Printed & published by M. M. Ganapathi at "Kodagu" Press, Mercara for "Kodagu" Ltd.